ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 299 RNI Number : KNKAN/25/A2770 13-11-2026 Friday Page 04, Price 2/- suddinimmuru@gmail.com Mob:-8660146563

ಸಂಪ್ರುಟ :01 ಸಂಚಿಕೆ:299 ರಾಯಚೂರು 13-11-2026 ಶುಕ್ರವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಬಳ್ಳಾರಿ: ಬಾಲಕಿಯರನ್ನು ವೇಶ್ಯಾವಾಟಿಕೆಗೆ ತಳ್ಳುತ್ತಿದ್ದ ಬೃಹತ್ ಜಾಲ ಬಯಲಿಗೆ

ಬಳ್ಳಾರಿ: ಹಣದ ಆಮಿಷವೊಡ್ಡಿ ಬಾಲಕಿಯರನ್ನು ವೇಶ್ಯಾವಾಟಿಕೆಗೆ ತಳ್ಳುತ್ತಿದ್ದ ಜಾಲವೊಂದನ್ನು ಬಳ್ಳಾರಿ ಪೊಲೀಸರು ರಹಸ್ಯ (ಡಿಕಾಯ್) ಕಾರ್ಯಾಚರಣೆಯ ಮೂಲಕ ಪತ್ತೆಹಚ್ಚಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ 11 ಮಂದಿಯನ್ನು ಬಂಧಿಸಿದ್ದಾರೆ. ಇನ್ನುಳಿದ ಐವರ ಪತ್ತೆಗೆ ಶೋಧ ಕಾರ್ಯ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದಲ್ಲಿ ಗೋವಿಂದಮ್ಮ, ನಾಗರಾಜ್, ರಾಜು, ಎರ್ರಿಸ್ವಾಮಿ, ಈರಮ್ಮ, ಮಹಮ್ಮದ್, ವಿನೂತಬಾಯಿ, ರಾಬಿಯಾ, ಗೌಸಿಯಾ, ಗಂಗಾಧರ, ಅನ್ವರ್ ಉಸ್ಮಾನ್, ರಾಹುಲ್, ಅಲಿಬೈ, ಅಶ್ರಫ್ ಹಾಗೂ ಬಾಬುರಾವ್ ಸೇರಿದಂತೆ 16 ಮಂದಿಯನ್ನು ಆರೋಪಿಗಳೆಂದು ಗುರುತಿಸಲಾಗಿದೆ. ಈ ಪೈಕಿ ಹನ್ನೊಂದು ಮಂದಿಯನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದ್ದು, ಉಳಿದ ಐವರಿಗಾಗಿ ಶೋಧ ಮುಂದುವರಿದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್ ಮಾಹಿತಿ ನೀಡಿದ್ದಾರೆ.

ವೇಶ್ಯಾವಾಟಿಕೆ ಜಾಲದ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ಮಾಹಿತಿ ನೀಡಿದರು. ( )

ಬಳ್ಳಾರಿ ನಗರದ ಮಿಲ್ಲರ್‌ಪೇಟೆಯಲ್ಲಿ ಕಳೆದ ಒಂದೂವರೆ ತಿಂಗಳಿನಿಂದ ಗೋವಿಂದಮ್ಮ ಎಂಬಾಕೆ ಸೇರಿದಂತೆ ಒಟ್ಟು 16 ಮಂದಿ ಸೇರಿಕೊಂಡು ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಬಡ ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರಿಗೆ ಹಣದ ಆಮಿಷವೊಡ್ಡಿ, ವೇಶ್ಯಾವಾಟಿಕೆಗೆ ತಳ್ಳುವ ಜಾಲ ನಡೆಸುತ್ತಿದ್ದರು. ಯುವತಿಯರನ್ನು ಟ್ರ್ಯಾಪ್ ಮಾಡಲು ವಿಶೇಷ ರೀತಿಯ ಸುಳ್ಳಿನಕತೆ ಕಟ್ಟುತ್ತಿದ್ದ ಈ ಗ್ಯಾಂಗ್, ಆರಂಭದಲ್ಲಿ ಯುವತಿಯರ ಫೋಟೋ ಪಡೆದು ನಂತರ ವಿವರ ಪಡೆದುಕೊಳ್ಳುತ್ತಿತ್ತು. ಲಕ್ಷ್ಮೀ ಪೂಜೆ ಮಾಡಿದ್ರೇ ಹಣದ ಮಳೆ ಬರುತ್ತದೆ ಎಂದು ಹಾಗೂ ಕೋಣೆಯೊಂದರಲ್ಲಿ ಹಣದ ರಾಶಿ ಇರುವ ಸುಳ್ಳು ವಿಡಿಯೋಗಳನ್ನು ನೀಡಿ ಯುವತಿಯರ ಮನವೊಲಿಸುತ್ತಿದ್ದರು. ಬಂದ ಹಣದಲ್ಲಿ ಯುವತಿಗೆ ಒಂದು ಪಾಲು, ಪೂಜೆ ಮಾಡಿದ ಸ್ವಾಮೀಜಿಗೊಂದು ಪಾಲು ಮತ್ತು ಯುವತಿ ಕರೆದು ಕೊಂಡು ಬಂದವರಿಗೆ ಒಂದು ಪಾಲು ನೀಡುವುದಾಗಿ ಪುಸಲಾಯಿಸುತ್ತಿದ್ದರು ಎಂಬುವುದು ತನಿಖೆಯಿಂದ ತಿಳಿದು ಬಂದಿರುವುದಾಗಿ ಎಸ್‌ಪಿ ತಿಳಿಸಿದ್ದಾರೆ.

ಮದುವೆಯಾಗದ ಕನ್ಯೆಯರ ಫೋಟೋ ಬೇಕು. ಅವರು ಐದು ಅಡಿ ಆರು ಇಂಚು ಕಡ್ಡಾಯವಾಗಿ ಇರಬೇಕು. ಬಲಗೈ ಮತ್ತು ಬಲಗಾಲಿನ ಪ್ರತ್ಯೇಕ ಫೋಟೋ ನೀಡಬೇಕು ಎನ್ನುತ್ತಿದ್ದ ಆರೋಪಿಗಳು, ಬಳಿಕ ಕೊನೆಯದಾಗಿ ಬೆತ್ತಲೆ ಫೋಟೋಗೆ ಬೇಡಿಕೆ ಇಡುತ್ತಿದ್ದರು. ಈ ಫೋಟೋಗಳನ್ನು ದುರ್ಬಳಕೆ ಮಾಡಲಾಗಿದೆ ಎಂಬ ಬಗ್ಗೆ ತನಿಖೆ ಮುಂದುವರಿದಿದೆ ಎಂದು ಎಸ್ಪಿ ತಿಳಿಸಿದ್ದಾರೆ.

ಬಳ್ಳಾರಿ, ಚಿಕ್ಕಮಗಳೂರು, ಮೈಸೂರು ಮತ್ತು ಆಂಧ್ರದ ಅನಂತಪುರದಲ್ಲಿ ಈ ಗ್ಯಾಂಗ್ ಸಕ್ರಿಯವಾಗಿರುವ ಮಾಹಿತಿ ಕೂಡ ಲಭ್ಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪ್ರಕರಣ ಸಂಬಂಧ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 243/2026ರ ಅಡಿಯಲ್ಲಿ ಬಿಎನ್‌ಎಸ್, ಐಟಿಪಿ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

ಈ ದಂಧೆಯನ್ನು ಆರೋಪಿಗಳು ಕೋಡ್‌ವರ್ಡ್‌ಗಳ ಮೂಲಕ ನಡೆಸುತ್ತಿದ್ದರು. ಆರೋಪಿಗಳು ಸಂತ್ರಸ್ತರನ್ನು 'ಪೇಪರ್' ಎಂದೂ, ಸ್ವಾಮಿಯನ್ನು 'ಡೀಲರ್' ಎಂದೂ ಗುರುತಿಸುತ್ತಿದ್ದರು. ಸಂತ್ರಸ್ತರ ವಿವಿಧ ಭಂಗಿಗಳ ಫೋಟೋ ಮತ್ತು ವಿಡಿಯೋಗಳನ್ನು ತೆಗೆದು ಯಾರಿಗೆ ಕಳುಹಿಸುತ್ತಿದ್ದರು ಹಾಗೂ ಅವುಗಳನ್ನು ಹೇಗೆ ಬಳಸುತ್ತಿದ್ದರು ಎಂಬ ಬಗ್ಗೆ ತನಿಖೆ ಮುಂದುವರಿದಿದೆ ಎಂದು ಎಸ್‌ಪಿ ಹೇಳಿದರು.

ಬಳ್ಳಾರಿಯ ಅಕ್ಕ ಪಡೆಯಿಂದ ಒಂದೂವರೆ ತಿಂಗಳು ಕಾರ್ಯಾಚರಣೆ: ಇದೊಂದು ಮಹತ್ವದ ಕಾರ್ಯಾಚರಣೆ. ಬಡ ಕುಟುಂಬಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಹಣದ ಆಮಿಷವೊಡ್ಡಿ ಲೈಂಗಿಕ ದೌರ್ಜನ್ಯಕ್ಕೆ ಬಳಸಿಕೊಳ್ಳುತ್ತಿದ್ದ ಬೃಹತ್ ಜಾಲ ಇದಾಗಿದ್ದು, ಜಿಲ್ಲಾ ಪೊಲೀಸರು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಳ್ಳಾರಿಯ ಅಕ್ಕ ಪಡೆ ಈ ಪ್ರಕರಣವನ್ನು ಭೇದಿಸಲೆಂದೇ ಸುಮಾರು ಒಂದೂವರೆ ತಿಂಗಳುಗಳ ಕಾಲ ಗುರುತು ಬದಲಿಸಿಕೊಂಡು ಆರೋಪಿಗಳೊಂದಿಗೆ ಸಂಪರ್ಕ ಸಾಧಿಸಿ ಕಾರ್ಯಾಚರಣೆ ನಡೆಸಿದೆ. ಈ ಮೂಲಕ ವೇಶ್ಯಾವಾಟಿಕೆ ಜಾಲವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದು, ಮಹಿಳಾ ಸಿಬ್ಬಂದಿಯ ಕಾರ್ಯವನ್ನು ಜಿಲ್ಲಾ ಪೊಲೀಸ್ ಇಲಾಖೆ ಶ್ಲಾಘಿಸಿದೆ'' ಎಂದು ಎಸ್‌ಪಿ ಪೆನ್ನೇಕರ್ ತಿಳಿಸಿದ್ದಾರೆ.

ಮಾದಕ ವಸ್ತುಗಳ ಬಗ್ಗೆ ಮಾಹಿತಿ ನೀಡಲು 'ನಾರ್ಕ್ ರಿಪೋರ್ಟರ್' ವೇದಿಕೆ ಬಿಡುಗಡೆ: ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸರು ಮಾದಕ ವಸ್ತುಗಳ ಅಕ್ರಮ ಜಾಲವನ್ನು ನಿಯಂತ್ರಿಸುವ ಉದ್ದೇಶದಿಂದ ಸಾರ್ವಜನಿಕರಿಗಾಗಿ 'ನಾರ್ಕ್ ರಿಪೋರ್ಟರ್' ( ) ಎಂಬ ಗೌಪ್ಯ ವೆಬ್ ವೇದಿಕೆಯನ್ನು ಬಿಡುಗಡೆ ಮಾಡಿದ್ದಾರೆ.

ಈ ವೇದಿಕೆಯ ಮೂಲಕ ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಸರಬರಾಜು, ಮಾರಾಟ ಮತ್ತು ಸೇವನೆ ಕುರಿತು ಸಾರ್ವಜನಿಕರು ತಮ್ಮ ಗುರುತನ್ನು ಬಹಿರಂಗಪಡಿಸದೆ ಮಾಹಿತಿ ನೀಡಬಹುದು. ಇದಕ್ಕಾಗಿ ಆ್ಯಪ್ ಡೌನ್‌ಲೋಡ್ ಮಾಡುವ ಅಗತ್ಯವಿಲ್ಲ. ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಸೇವೆ ಲಭ್ಯವಿದೆ.

ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ ://--.. ಲಿಂಕ್ ಬಳಸಿ ದೂರು ಸಲ್ಲಿಸಬಹುದು. ಮಾದಕ ವಸ್ತುಗಳ ಮಾರಾಟಕ್ಕೆ ಬಳಸುವ ಆನ್‌ಲೈನ್ ಆ್ಯಪ್‌ಗಳು, ಟೆಲಿಗ್ರಾಂ, ಇನ್‌ಸ್ಟಾಗ್ರಾಂ ಖಾತೆಗಳು, ಅನುಮಾನಾಸ್ಪದ ವ್ಯಕ್ತಿಗಳು, ವಾಹನಗಳು ಹಾಗೂ ಅಕ್ರಮ ದಾಸ್ತಾನು ಕೇಂದ್ರಗಳ ಬಗ್ಗೆ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

4ನೇ ಪುಟಕ್ಕೆ

ಅಕ್ಕ ಕೆಫೆಗಳ ಅನುಷ್ಠಾನದಲ್ಲಿ ರಾಜ್ಯದಲ್ಲೇ ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ

ಜಿಲ್ಲಾ ಪಂಚಾಯತ್ ಸಿಇಒಗೆ ಅಭಿಯಾನ ನಿರ್ದೇಶಕರಿಂದ ಪ್ರಶಂಸನಾ ಪತ್ರ

ರಾಯಚೂರು: ನ.12: ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಈಲ್ಗಫ್ಕೆಔಖ) ಅಡಿ ಯಲ್ಲಿ ಅಕ್ಕ ಕೆಫೆಗಳ ಅನುಷ್ಠಾನದಲ್ಲಿ ವಿಶೇಷ ಸಾಧನೆ ಮಾಡಿದ ರಾಯಚೂರು ಜಿಲ್ಲೆಗೆ ರಾಜ್ಯಮಟ್ಟದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.



ಜಿಲ್ಲೆಯಾದ್ಯಂತ ಒಟ್ಟು 8 ಅಕ್ಕ ಕೆಫೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕ ರಾಜ್ಯದಲ್ಲಿಯೇ ಅತಿ ಹೆಚ್ಚು ಅಕ್ಕ ಕೆಫೆಗಳನ್ನು ಸ್ಥಾಪಿಸಿದ ಜಿಲ್ಲೆಯಾಗಿ ರಾಯಚೂರು ಗುರುತಿ ಸಿಕೊಂಡಿದೆ. ಈ ಮಹತ್ವದ ಸಾಧನೆಯನ್ನು ಪರಿಗಣಿಸಿ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಮಾನ್ಯ ಅಭಿಯಾನ ನಿರ್ದೇಶಕರಾದ ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ, ಭಾ.ಆ.ಸೇ., ಅವರು ರಾಯಚೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಈಶ್ವರ್ ಕಾಂದೂ, ಭಾ.ಆ.ಸೇ., ಅವರಿಗೆ ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದ್ದಾರೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಗ್ರಾಮೀಣ ಪ್ರದೇಶಗಳ ಸ್ವ-ಸಹಾಯ ಗುಂಪುಗಳ ಮಹಿಳೆಯರಿಗೆ ಕೃಷಿಯೇ ತರ ವಲಯದಲ್ಲಿ ನಿಗದಿತ ಗುರಿಗಳ ಜೊತೆಗೆ ನವೀನ ಉದ್ಯಮ ಚಟುವಟಿಕೆಗಳು ಹಾಗೂ ವಿವಿಧ ಇಲಾಖೆ ಗಳ ಸಹಯೋಗ ಮತ್ತು ಒಗ್ಗೂಡಿಸು ವಿಕೆಯ ಮೂಲಕ ಒಂದಕ್ಕಿಂತ ಹೆಚ್ಚು ಜೀವನೋಪಾಯ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ರಾಯಚೂರು ಜಿಲ್ಲೆ ನಿರಂತರವಾಗಿ ಶ್ರಮಿಸುತ್ತಿದೆ. ಅಕ್ಕ ಕೆಫೆಗಳ ಅನುಷ್ಠಾನದ ಮೂಲಕ ಸ್ವ-ಸಹಾಯ ಗುಂಪುಗಳ ಮಹಿಳೆಯರಿಗೆ ಉದ್ಯಮಶೀಲತಾ ಅವಕಾಶಗಳನ್ನು ಒದಗಿಸುವುದು, ಸುಸ್ಥಿರ ಜೀವನೋಪಾಯವನ್ನು ಉತ್ತೇಜಿಸುವುದು ಹಾಗೂ ಮಹಿಳೆ ಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣಕ್ಕೆ ಉತ್ತೇಜನ ನೀಡುವ ಕಾರ್ಯ ಶ್ಲಾಘನೀಯ ವಾಗಿದೆ ಎಂದು ಅಭಿಯಾನ ನಿರ್ದೇಶಕರು ಪ್ರಶಂಸಿಸಿದ್ದಾರೆ. ಜಿಲ್ಲೆಯಲ್ಲಿ 8 ಅಕ್ಕ ಕೆಫೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ರುವುದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾ ರಿಗಳ ಸಮರ್ಥ ನಾಯಕತ್ವ, ಮಾರ್ಗ ದರ್ಶನ ಮತ್ತು ಬದ್ಧತೆಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಂಘಟಿತ ಪ್ರಯತ್ನದ ಫಲವಾಗಿದೆ. ಈ ಮೂಲಕ ಗ್ರಾಮೀಣ ಮಹಿಳೆ ಯರಿಗೆ ಸ್ವಂತ ಉದ್ಯಮಗಳನ್ನು ನಡೆಸಲು ಅವಕಾಶ ಕಲ್ಪಿಸುವುದರ ಜೊತೆಗೆ ಅವರ ಆದಾಯ ವೃದ್ಧಿ, ಸ್ವಾವಲಂಬನೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಲಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಈ ಸಾಧನೆಗಾಗಿ ಜಿಲ್ಲಾ ಅಭಿ ಯಾನ ನಿರ್ವಹಣಾ ಘಟಕದ ಸಿಬ್ಬಂದಿ, ಪಂಚಾಯತ್ ಅಧಿಕಾರಿ ಗಳು ಮತ್ತು ಸಿಬ್ಬಂದಿ, ಸಂಬಂಧಿತ ಸ್ವ-ಸಹಾಯ ಗುಂಪುಗಳು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂ ಟಗಳ ಕಾರ್ಯನಿರ್ವಹಣೆಯನ್ನು ಅಭಿಯಾನ ನಿರ್ದೇಶಕರು ಹೃತ್ಪೂರ್ವಕವಾಗಿ ಅಭಿನಂದಿಸಿ ಪ್ರಶಂಸಿ ಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಅಕ್ಕ ಕೆಫೆಗಳ ಸುಸ್ಥಿರ ಕಾರ್ಯನಿರ್ವಹಣೆ,

ಗುಣಮಟ್ಟದ ಸೇವೆ, ಉದ್ಯಮಗಳ ಬೆಳವಣಿಗೆ ಹಾಗೂ ಮಹಿಳೆಯರ ಜೀವನೋಪಾಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಇದೇ ರೀತಿಯ ಬದ್ಧತೆ ಮತ್ತು ಉತ್ಸಾಹದಿಂದ ಕಾರ್ಯನಿರ್ವಹಿಸುವಂತೆ ಆಶಯ ವ್ಯಕ್ತಪಡಿಸಿದ್ದಾರೆ.

4ನೇ ಪುಟಕ್ಕೆ



ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಪದವಿ ವಸತಿ ನಿಲಯಕ್ಕೆ ಭೇಟಿ ನೀಡಿದ ಬಸನಗೌಡ ಬಾದರ್ಲಿ

ಸಿಂಧನೂರು :11-11-2026 ಇಂದು ಬೆಳಿಗ್ಗೆ ಸಿಂಧನೂರು ನಗರದ. ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಸರಕಾರಿ ಮೆಟ್ರಿಕ್ ನಂತರದ ಪದವಿ ವಸತಿ ನಿಲಯಕ್ಕೆ. ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರು ಭೇಟಿ ನೀಡಿ. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳು ಹಾಗೂ ವಸತಿ ನಿಲಯದಲ್ಲಿನ ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ಆಹಾರ. ಕುಡಿಯುವ ನೀರು. ಸ್ವಚ್ಛತೆಯ ವಸತಿಯ ವ್ಯವಸ್ಥೆ. ಸೇರಿದಂತೆ ವಸತಿ ನಿಲಯದ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆ ಹಾಗೂ ಕುಂದು ಕೊರತೆಗಳನ್ನು ಆಲಿಸಿದರು. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು. ಸಮರ್ಪಕವಾಗಿ ಒದಗಿಸುವದು. ಹಾಗೂ ಕಂಡು ಬಂದಿರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಸಂಬಂಧ ಪಟ್ಟ ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಯಚೂರು ಪಡಿತರ ಚೀಟಿ ಇ-ಕೆವೈಸಿ ನ.30 ಕೊನೆ ದಿನ; ಜಿಲ್ಲೆಯಲ್ಲಿ 1.63 ಲಕ್ಷ ಫಲಾನುಭವಿಗಳ ಬಾಕಿ



ರಾಯಚೂರು: ಜಿಲ್ಲೆಯ ಎಲ್ಲ ಪಡಿತರ ಚೀಟಿಗಳಲ್ಲಿನ ಸದಸ್ಯರು ಪ್ರತಿ ಐದು ವರ್ಷಗಳಿಗೊಮ್ಮೆ ಇ-ಕೆವೈಸಿ ಮಾಡಿಸುವುದು ಕಡ್ಡಾಯವಾಗಿದೆ. ಜಿಲ್ಲೆಯಲ್ಲಿ ಐದು ವರ್ಷ ಪೂರ್ಣಗೊಂಡಿರುವ 9,50, 029 ಫಲಾನುಭವಿಗಳ ಪೈಕಿ 7,86,143 ಫಲಾನುಭವಿಗಳ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡಿದೆ. ಇನ್ನೂ 1,63,886 ಫಲಾನುಭವಿಗಳ ಇ-ಕೆವೈಸಿ ಬಾಕಿ ಉಳಿದಿದ್ದು, ನಿಗದಿತ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಸೂಚಿಸಲಾಗಿದೆ.

ಬಾಕಿ ಇರುವ ಫಲಾನುಭವಿಗಳು ತಮಗೆ ಜೋಡಣೆಯಾಗಿರುವ ನ್ಯಾಯಬೆಲೆ ಅಂಗಡಿಗೆ ಖುದ್ದಾಗಿ ಭೇಟಿ ನೀಡಿ ಇ-ಕೆವೈಸಿ ಮಾಡಿಸಬೇಕು. ಅಲ್ಲದೆ, ಅನ್ನ ಸೇವೆ ಮೊಬೈಲ್ ಆ್ಯಪ್ ಮೂಲಕವೂ ಇ-ಕೆವೈಸಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಇ-ಕೆವೈಸಿ ಪ್ರಕ್ರಿಯೆ ಸಂಪೂರ್ಣ ಉಚಿತವಾಗಿದ್ದು, ಶುಲ್ಕ ಪಾವತಿಸುವ ಅಗತ್ಯವಿಲ್ಲ. ಬಾಕಿ ಇರುವ ಫಲಾನು ಭವಿಗಳು ನ'.30ರ'ೊಳ'ಗ' ಪೂರ್ಣಗೊಳಿಸಬೇಕು.

ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಪಡಿತರ ಚೀಟಿಯಿಂದ ಅಂತಹ ಫಲಾನುಭವಿಗಳ ಹೆಸರು ತೆಗೆದು ಹಾಕಲು ಕ್ರಮ ವಹಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನಸಿನ ಕ್ಷೇತ್ರ ನಿರ್ಮಾಣದತ್ತ ಶಾಸಕರ ದಿಟ್ಟ ನಡಿಗೆ: ಕ್ಷೇತ್ರದ ಅಭಿವೃದ್ಧಿಗೆ ನವ ಚೈತನ್ಯ-ಶಾಸಕ ಬಸನಗೌಡ ದದ್ದಲ್





ರಾಯಚೂರು ನ11 ರಸ್ತೆಯಿಂದ ಶಿಕ್ಷಣದವರೆಗೆ ಮೂಲಭೂತ ಸೌಕರ್ಯದಿಂದ ಧಾರ್ಮಿಕ ಕ್ಷೇತ್ರಗಳ ವರೆಗೆ ಪ್ರತಿಯೊಂದು ಗ್ರಾಮಕ್ಕೂ ಅಭಿವೃದ್ಧಿ ಪ್ರತಿಯೊಬ್ಬರಿಗೂ ಸೌಲಭ್ಯ ಎಂಬ ಸಂಕಲ್ಪದೊಂದಿಗೆ ಅಭಿವೃದ್ಧಿಯ ಪಯಣ ಮುಂದುವರೆಯುತ್ತದೆ ಇಂದು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಶಾಲ ಕೊಠಡಿಗಳು ದೇವಸ್ಥಾನಗಳು ಕುಡಿಯುವ ನೀರು ಹಾಗೂ ಸಮುದಾಯ ಭವನ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ

ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ರವರು ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಕಾಮಗಾರಿಗಳ ಭೂಮಿ ಪೂಜೆ ಉದ್ಘಾಟನೆ ಹಾಗೂ ಪರಿಶೀಲನೆ ನಡೆಸಿದ ಶಾಸಕರು ಗಣಮೂರು ಗ್ರಾಮದಿಂದ ಕಟಕನೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣ ಕಾಮಗಾರಿಗೆ ಅಂದಾಜು ರೂ150 ಲಕ್ಷ ವೆಚ್ಚದಲ್ಲಿ ಭೂಮಿ ಪೂಜೆ ನಾಗನದೊಡ್ಡಿ: ಮಾರಮ್ಮ ದೇವಿಯ ದೇವಸ್ಥಾನದ ಕಾಮಗಾರಿಗೆ

4ನೇ ಪುಟಕ್ಕೆ

ಶಿಕ್ಷಣ ತಜ್ಞರ ಆಕ್ಷೇಪಣೆಗಳನ್ನು ಕಡೆಗಣಿಸಿ ಯೋಜನೆ ಜಾರಿಗೊಳಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ!

ಸಾಲದ ಹೆಸರಿನಲ್ಲಿ ಸರ್ಕಾರಿ ಶಾಲೆಗಳ ವಿಲೀನ, ಖಾಸಗೀಕರಣಕ್ಕೆ ಅವಕಾಶ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನೇ ಬಲಿಕೊಡಲು ಹೊರಟಿರುವ ಸರ್ಕಾರದ ನೀತಿ ಖಂಡನೀಯ!

ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಶಿಕ್ಷಣ ತಜ್ಞರು, ಶಿಕ್ಷಣ ಹೋರಾಟಗಾರರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪ್ರಜ್ಞಾವಂತ ನಾಗರಿಕರ ಆಕ್ಷೇಪಣೆಗಳನ್ನು ಗಂಭೀರವಾಗಿ ಪರಿಗಣಿಸದೆ ಕರ್ನಾಟಕ ಪಬ್ಲಿಕ್ ಸ್ಕೂಲ್ಸ್ () ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಬದಲು ಶಾಲೆಗಳ ವಿಲೀನ, ಮೂಲಸೌಕರ್ಯಗಳ ಖಾಸಗೀಕರಣ ಹಾಗೂ ಸರ್ಕಾರಿ ಶಾಲಾ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸುವ ಸಾಧ್ಯತೆಗಳಿಗೆ ಅವಕಾಶ ಕಲ್ಪಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಏಷ್ಯನ್ ಅಭಿವೃದ್ಧಿ ಬ್ಯಾಂಕ್ () ಕರ್ನಾಟಕದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಸುಧಾರಣೆಗಾಗಿ 182.89 ಮಿಲಿಯನ್ ಅಮೆರಿಕನ್ ಡಾಲರ್ ಸಾಲವನ್ನು ಅನುಮೋದಿಸಿದೆ. ಈ ಯೋಜನೆಯಡಿ 500 ಸಮಗ್ರ ಶಾಲಾ ಸಮೂಹಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ಆದರೆ ಈ ಯೋಜನೆಯ ಹೆಸರಿನಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವುದು, ಶಾಲಾ ಕಟ್ಟಡ ಮತ್ತು ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ವಹಿಸುವ ಪ್ರಸ್ತಾಪಗಳು ಸಾರ್ವಜನಿಕ ಶಿಕ್ಷಣದ ಭವಿಷ್ಯದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ.

+ 202425ರ ಅಧಿಕೃತ ಅಂಕಿಅಂಶಗಳ ಪ್ರಕಾರ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ 47,34,360 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇವರು ಬಹುಪಾಲು ಬಡವರು, ದಲಿತರು, ಆದಿವಾಸಿಗಳು, ಹಿಂದುಳಿದ ಸಮುದಾಯಗಳು, ಕಾರ್ಮಿಕರು ಮತ್ತು ರೈತ ಕುಟುಂಬಗಳ ಮಕ್ಕಳು. ಇವರ ಶಿಕ್ಷಣದ ಹಕ್ಕನ್ನು ಶಾಲೆಗಳ ವಿಲೀನ ಮತ್ತು ಖಾಸಗೀಕರಣದ ಪ್ರಯೋಗಗಳಿಗೆ ಬಲಿಕೊಡುವುದು ಸಾಮಾಜಿಕ ನ್ಯಾಯಕ್ಕೆ ಮಾಡುವ ದ್ರೋಹವಾಗಿದೆ.

ಭಾರತ ಸಂವಿಧಾನದ 21ಎ ವಿಧಿ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಖಾತರಿಪಡಿಸುತ್ತದೆ. 14ನೇ ವಿಧಿಯ ಸಮಾನತೆಯ ಆಶಯ, 38 ಮತ್ತು 46ನೇ

4ನೇ ಪುಟಕ್ಕೆ

ವನ್ಯಜೀವಿಗಳನ್ನು ಕೊಲ್ಲಬೇಡಿ ರಕ್ಷಿಸಿ : ಪಿಕಳಿಹಾಳ ಅಯ್ಯಪ್ಪ

ಆಭರಣ ಎಂಬ ಹಾವನ್ನು ಅರಣ್ಯಕ್ಕೆ ಕಳಿಸಿ ರಕ್ಷಣೆ

ರಾಯಚೂರು: ನಗರದ ವಾರ್ಡ್ ನಂ. 22ರ ಮಡ್ಡಿಪೇಟೆಯ ನಿವಾಸಿ ಛಾಯಾಗ್ರಾಹಕರು, ಕಲಾವಿದರು, ಪತ್ರಕರ್ತರಾದ ಪಿಕಳಿಹಾಳ ಅಯ್ಯಪ್ಪ ಸ್ವಾಮಿ ಶ್ರೀದೇವಿ ಹಿರೇಮಠರವರ ಮನೆಯಲ್ಲಿ (ಚಿಕ್ಕ ಉರಗ) ಉರಗ ತಜ್ಞರು, ಫ್ರೆಂಡ್ಸ್ ವೈಡ್ ಲೈಫ್ ರಸ್ಕ್ಯೂರ್ಸ್ ಸೊಸೈಟಿಯ ಹಪ್ಸರ್ ಹುಸೇನ್ (9900127861)ರವರ ಶಿಷ್ಯನಾದ ಉದಯ ಕುಮಾರರವರು ಹೇಳಿದ ಹಾಗೆ ಆಭರಣ ಎಂಬ ಹೆಸರಿನ ಚಿಕ್ಕ ಉರಗವೊಂದು ಪ್ರತ್ಯಕ್ಷವಾಗಿತ್ತು.

ಹಾವನ್ನು ಕಂಡ ತಕ್ಷಣವೇ ಮನೆಯ ಯಜಮಾನಿ ಶ್ರೀದೇವಿಯವರು ಕಲ್ಮಾಲಿ ಕರಿಯಪ್ಪ ತಾತನವರನ್ನು ಸ್ಮರಿಸಿ ಭಸ್ಮ ಮತ್ತು ಕಿಲ್ಲೇಬೃಹನ್ಮಠ ಹಾಗೂ ಸೋಮವಾರಪೇಟೆ ಹಿರೇಮಠದ ಶ್ರೀಗಳು ಮಂತ್ರಿಸಿ ಆಶೀರ್ವಾದ ಮಾಡಿದ ಮಂತ್ರಾಕ್ಷತಿಗಳನ್ನು ಪ್ರೋಕ್ಷಣೆ ಮಾಡಿದ ನಂತರ ಪ್ರತ್ಯಕ್ಷವಾದ ಹಾವು ಬೇರೆ ಕಡೆ ಎಲ್ಲಿಯೂ ಹೋಗದೇ ಒಂದೇ ಸ್ಥಳದಲ್ಲಿ ಕುಳಿತಿದ್ದರಿಂದ ಉರಗ ತಜ್ಞರಿಗೆ ಹಾವನ್ನು ಹಿಡಿಯಲು ಅನುಕೂಲವಾಯಿತು.

ಆ ದೇವರ ಮತ್ತು ಮತ್ತು ಶ್ರೀಗಳ ಆಶೀರ್ವಾದವೇನೋ ಗೊತ್ತಿಲ್ಲ ಭಸ್ಮ ಮತ್ತು ಮಂತ್ರಾಕ್ಷತೆಯ ಪವಾಡದಿಂದ ಸುಮಾರು ಒಂದು ಗಂಟೆಯವರೆಗೆ ಒಂದೇ ಸ್ಥಳದಲ್ಲಿ ಆವರಿಸಿಕೊಂಡ ಹಾವು ಮುಂದೆ ಹೋಗಲು ಸಾಧ್ಯವಾಗದೇ ಇರುವುದು ನಿಜಕ್ಕೂ



ಆಶ್ಚರ್ಯಕರವಾಗಿತ್ತು.

ನಂತರ ಉರಗ ತಜ್ಞ ಉದಯ ಕುಮಾರ ಆಗಮಿಸಿ ಇದು ಕೆಟ್ಟ ಥಳಿಯ ಹಾವು ಇರುವುದಿಲ್ಲ ಇದರ ಹೆಸರು ಆಭರಣ ಹಾವು ಎಂದು ಕರೆಯುತ್ತಾರೆ, ಇದು ಇಲ್ಲಿ ಆಗಮಿಸಿದೆ ಅಂದರೆ ಆ ಭಗವಂತನ ಪುಣ್ಯವಿರಬಹುದು, ಇಂಥ ಹಾವುಗಳು ಕಾಣುವುದು ಬಹಳ ವಿರಳವಾಗಿವೆ ಎಂದು ಹೇಳಿದರು.

ಇತ್ತೀಚೆಗೆ ಫೇಸ್ ಬುಕ್, ಯುವ ಟ್ಯೂಬ್, ಇಂಸ್ಟಾಗ್ರಾಂ ಗಳಂತ ಅಂತರ್ಜಾಲದಲ್ಲಿ ವೀಕ್ಷಿಸಿ ಇಂಥ ಹಾವುಗಳು ಕಂಡಾಕ್ಷಣ ಹಾವನ್ನು ಹಿಡಿಯಲು ಪ್ರಯತ್ನಿಸಿ ತಮ್ಮ ಜೀವಕ್ಕೆ ಅಪಾಯ ತಂದುಕೊಂಡಂಥ ಘಟನೆಗಳು ಹೆಚ್ಚಾಗಿವೆ, ಆದಕಾರಣ ಯಾರೂ ಕೂಡ ಸುಮ್ಮನೇ ಹಾವುಗಳನ್ನು

4ನೇ ಪುಟಕ್ಕೆ

ಬಡ ಕುಟುಂಬದ ಪುಟ್ಟ ಮನೆಯಲ್ಲಿ ದೀಪಾವಳಿ ಆಚರಿಸಿದ ನಟಿ ಪೂಜಾ ರಮೇಶ್
ಐಷಾರಾಮಿ ಬದುಕಿನ ಆಡಂಬರ ಬದಿಗಿಟ್ಟು ಮಾನವೀಯತೆ ಮೆರೆದ ಸಮಾಜಸೇವಕಿ



ರಾಯಚೂರು:
ಸಾಮಾನ್ಯವಾಗಿ ಐಷಾರಾಮಿ ಮನೆಗಳಲ್ಲಿ ಅದ್ದೂರಿಯಾಗಿ ಹಬ್ಬ ಆಚರಿಸುವುದನ್ನು ಕಾಣುತ್ತೇವೆ. ಆದರೆ ಬೆಂಗಳೂರಿನ ಡಾಲರ್ಸ್ ಕಾಲೋನಿಯ ಐಷಾರಾಮಿ ಬದುಕನ್ನು ಬದಿಗಿಟ್ಟು, ರಾಯಚೂರಿನ ಆಶ್ರಯ ಕಾಲೋನಿಯ ಬಡ ಕುಟುಂಬವೊಂದರ ಪುಟ್ಟ ಟಿನ್‌ಶೆಡ್ ಮನೆಯಲ್ಲಿ ವಾಸ್ತವ್ಯ ಮಾಡಿ, ಅವರೊಂದಿಗೆ ದೀಪಾವಳಿ ಹಬ್ಬ ಆಚರಿಸುವ ಮೂಲಕ ಚಿತ್ರನಟಿ ಹಾಗೂ ಸಮಾಜಸೇವಕಿ ಡಾ. ಪೂಜಾ ರಮೇಶ್ ಮಾನವೀಯತೆ ಮತ್ತು ಸರಳತೆಯ ಸಂದೇಶ ಸಾರಿದ್ದಾರೆ.ಐರಾಯಚೂರು ನಗರದ ವಾರ್ಡ್ ನಂ. 28ರ ಹೊಸ ಆಶ್ರಯ ಕಾಲೋನಿಯ ಎಪಿಎಂಸಿ ಮಾರುಕಟ್ಟೆಯಲ್ಲಿ ಹಮಾಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಸೈಕಲ್ ರಾಮಣ್ಣ ಅವರ ಮನೆಗೆ ಭೇಟಿ ನೀಡಿದ ಡಾ. ಪೂಜಾ ರಮೇಶ್, ರಾಮಣ್ಣ, ಅವರ ಪತ್ನಿ ಬಸ್ಸಮ್ಮ ಹಾಗೂ ಮಕ್ಕಳೊಂದಿಗೆ ದೀಪಾವಳಿ ಹಬ್ಬದ ಸಂಭ್ರಮ ಹಂಚಿಕೊಂಡರು. ಮಕ್ಕಳೊಂದಿಗೆ ಪಟಾಕಿ ಸಿಡಿಸಿ, ಮನೆಯ ಪುಟ್ಟ ಅಂಗಳದಲ್ಲಿ ದೀಪಗಳನ್ನು ಬೆಳಗಿಸಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.ಐಸಮಾಜದಲ್ಲಿ ಎಷ್ಟೇ ದೊಡ್ಡ ಸ್ಥಾನಮಾನ, ಹೆಸರು ಹಾಗೂ ಜನಪ್ರಿಯತೆ ಗಳಿಸಿದರೂ ಸಾಮಾನ್ಯ ಜನರೊಂದಿಗೆ ಬೆರೆಯುವ ಗುಣವೇ ವ್ಯಕ್ತಿಯ ನಿಜವಾದ ದೊಡ್ಡತನ ಎಂಬುದಕ್ಕೆ ಪೂಜಾ ರಮೇಶ್ ಅವರ ನಡೆ ಸಾಕ್ಷಿಯಾಯಿತು.

ಯಾವುದೇ ಆಡಂಬರ, ಅಹಂಕಾರವಿಲ್ಲದೆ ಬಡ ಕುಟುಂಬದ ಮನೆಗೆ ತೆರಳಿ ಅವರೊಂದಿಗೆ ಆತ್ಮೀಯವಾಗಿ ಬೆರೆತ ಅವರು, ಮನೆಯ ಸದಸ್ಯರಲ್ಲೊಬ್ಬರಂತೆ ಸಮಯ ಕಳೆದರು.ಐರಾಮಣ್ಣ ಮತ್ತು ಬಸ್ಸಮ್ಮ ತಮ್ಮ ಮನೆಯ ಪರಿಸ್ಥಿತಿಯ ನಡುವೆಯೂ ಪ್ರೀತಿಯಿಂದ ನಟಿಯನ್ನು ಸ್ವಾಗತಿಸಿ, ಮನೆಯಲ್ಲಿ ಸಿದ್ಧಪಡಿಸಿದ ಊಟವನ್ನು ಉಣಬಡಿಸಿದರು. ಅವರ ಪ್ರೀತಿಯ ಆತಿಥ್ಯ ಸ್ವೀಕರಿಸಿದ ಡಾ. ಪೂಜಾ ರಮೇಶ್, ಆಶ್ರಯ ಕಾಲೋನಿಯ ಪುಟ್ಟ ಟಿನ್‌ಶೆಡ್ ಮನೆಯಲ್ಲಿ ರಾತ್ರಿ ವಾಸ್ತವ್ಯ ಮಾಡುವ ಮೂಲಕ ತಮ್ಮ ಸರಳ ವ್ಯಕ್ತಿತ್ವವನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಸಾಮಾನ್ಯವಾಗಿ ಸಿನಿಮಾ ಕ್ಷೇತ್ರದ ಗಣ್ಯರು ಐಷಾರಾಮಿ ಹೋಟೆಲ್‌ಗಳು ಹಾಗೂ ವಿಶೇಷ ಆತಿಥ್ಯಕ್ಕೆ ಆದ್ಯತೆ ನೀಡುವ ಸಂದರ್ಭದಲ್ಲಿ, ಬಡ ಕುಟುಂಬವೊಂದರ ಪುಟ್ಟ ಮನೆಯಲ್ಲಿ ಉಳಿದುಕೊಂಡು ಅವರೊಂದಿಗೆ ಹಬ್ಬ ಆಚರಿಸಿರುವುದು ವಿಶೇಷ ಗಮನ ಸೆಳೆಯಿತು. ಹಬ್ಬವೆಂದರೆ ಕೇವಲ ಹೊಸ ಬಟ್ಟೆ, ಸಿಹಿತಿಂಡಿ, ಪಟಾಕಿ ಮತ್ತು ಬೆಳಕಿನ ಸಂಭ್ರಮವಷ್ಟೇ ಅಲ್ಲ; ನಮ್ಮ ಸುತ್ತಮುತ್ತಲಿನವರೊಂದಿಗೆ ಸಂತೋಷ ಹಂಚಿಕೊಳ್ಳುವುದು ಹಾಗೂ ಸಂಕಷ್ಟದಲ್ಲಿರುವವರ ಮುಖದಲ್ಲಿ ನಗು ಮೂಡಿಸುವುದೇ ಹಬ್ಬದ ನಿಜವಾದ ಅರ್ಥ ಎಂಬ ಸಂದೇಶವನ್ನು ಅವರು ಸಾರಿದರು.

ರಾಯಚೂರು

ಜಿಲ್ಲೆಗೆ ಈ ಹಿಂದೆ ಹಲವು ಬಾರಿ ಆಗಮಿಸಿದ್ದರೂ, ಈ ಬಡಾವಣೆಗೆ ಮೊದಲ ಬಾರಿಗೆ ಭೇಟಿ ನೀಡಿದ ಡಾ. ಪೂಜಾ ರಮೇಶ್ ಅವರನ್ನು ಎಲ್‌ಬಿಎಸ್ ನಗರದ ಅಭಿಮಾನಿಗಳು ಹಾಗೂ ಸಾರ್ವಜನಿಕರು ಆತ್ಮೀಯವಾಗಿ ಸ್ವಾಗತಿಸಿದರು. ಅವರ ಸರಳ ನಡೆ, ಮಾನವೀಯ ಗುಣ ಹಾಗೂ ಸಮಾಜಸೇವಾ ಮನೋಭಾವಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ಬಡ ಕುಟುಂಬದ ಮಕ್ಕಳಿಗೆ ವಿಶೇಷ ಸಂತೋಷ ನೀಡುವುದರ ಜತೆಗೆ, ಕುಟುಂಬದ ಸದಸ್ಯರಿಗೆ ಮರೆಯಲಾಗದ ಹಬ್ಬದ ಅನುಭವವನ್ನು ಉಡುಗೊರೆಯಾಗಿ ನೀಡಿದರು.

ಡಾ. ಪೂಜಾ ರಮೇಶ್ ಅವರು ಕೇವಲ ಚಿತ್ರನಟಿಯಾಗಿ ಗುರುತಿಸಿಕೊಳ್ಳದೆ, ಸಮಾಜದ ವಿವಿಧ ಸಮಸ್ಯೆಗಳಿಗೆ ಸ್ಪಂದಿಸುವ ಸಮಾಜಸೇವಕಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕನ್ನಡ ಶಾಲೆಗಳ ಉಳಿವು ಮತ್ತು ಅಭಿವೃದ್ಧಿಗಾಗಿ ಹೋರಾಟ ನಡೆಸುತ್ತಿದ್ದು, ಮಹಿಳೆಯರು ಹಾಗೂ ಸಂಕಷ್ಟದಲ್ಲಿರುವ ಮಕ್ಕಳ ಸಮಸ್ಯೆಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದು, ಅವರಲ್ಲಿರುವ ಪ್ರತಿಭೆಗೆ ಸೂಕ್ತ ವೇದಿಕೆ ದೊರೆಯಬೇಕು ಎಂಬ ಆಶಯದೊಂದಿಗೆ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಇದಕ್ಕೂ ಮೊದಲು ರಾಯಚೂರು ನಗರದಲ್ಲಿ ಚಿಂದಿ ಆಯುವ ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸಮಾಜದ ಮುಂದೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಚಿಂದಿ ಸ್ಟಾರ್ಸ್ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಿದ್ದರು. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗುವ ಮಕ್ಕಳಿಗೂ ಪ್ರತಿಭೆ, ಕನಸು ಮತ್ತು ಸಾಧಿಸುವ ಛಲವಿದೆ ಎಂಬುದನ್ನು ರಾಜ್ಯದ ಗಮನಕ್ಕೆ ತರುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿತ್ತು.

ಕಲಾವಿದೆಯಾಗಿ ಜನರನ್ನು ರಂಜಿಸುವುದರ ಜತೆಗೆ ಸಮಾಜದ ನೋವು, ಸಂಕಷ್ಟಗಳಿಗೆ ಸ್ಪಂದಿಸುವುದು, ಬಡವರೊಂದಿಗೆ ಸಂತೋಷ ಹಂಚಿಕೊಳ್ಳುವುದು ಹಾಗೂ ಅವಕಾಶ ವಂಚಿತ ಮಕ್ಕಳಿಗೆ ಪ್ರೋತ್ಸಾಹ ನೀಡುವುದು ನಿಜವಾದ ಸಮಾಜಸೇವೆಯಾಗಿದೆ. ಡಾ. ಪೂಜಾ ರಮೇಶ್ ಅವರ ಇಂತಹ ಕಾರ್ಯಗಳು ಸಮಾಜದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವ ಜತೆಗೆ ಇತರರಿಗೂ ಮಾದರಿಯಾಗಿವೆ.ಐದೀಪಾವಳಿಯ ಬೆಳಕನ್ನು ಕೇವಲ ತಮ್ಮ ಮನೆಗಳಿಗೆ ಸೀಮಿತಗೊಳಿಸದೆ, ಬಡವರ ಬದುಕಿನಲ್ಲಿಯೂ ಸಂತೋಷದ ಬೆಳಕು ಮೂಡಿಸಿದ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಇಂತಹ ಸಮಾಜಮುಖಿ ಕಲಾವಿದರು ಇನ್ನಷ್ಟು ಜನರಿಗೆ ಸ್ಫೂರ್ತಿಯಾಗಲಿ ಎಂಬುದು ಎಲ್ಲರ ಆಶಯವಾಗಿದೆ.ಐತುಳಸಿ ಯಾದವ್

ಠ2027ರಲ್ಲಿ ಮೂರು ದಿನಗಳ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ : ಸಿಎಂ ಡಿ.ಕೆ.ಶಿವಕುಮಾರ್



ಮೈಸೂರು:
ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಸಾಹಿತಿ ವೀರಪ್ಪ ಮೊಯ್ಲಿ ಅವರ ನೇತೃತ್ವದಲ್ಲಿ 2027ರಲ್ಲಿ ಮೂರು ದಿನಗಳ ಕಾಲ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುವುದು. ಈ ಕುರಿತು ಮುಂದಿನ ಬಜೆಟ್‌ನಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಘೋಷಿಸಿದರು.

ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯಿಲಿಯವರ ವಿಶ್ವಸಂಸ್ಕೃತಿಯ ಮಹಾಯಾನ (ಸಂಪುಟ 4)- ಗದ್ಯ ಮಹಾಕಾವ್ಯವನ್ನು ಮೈಸೂರಿನ ಊಟಿ ರಸ್ತೆಯ ಜೆಎಸ್ ಎಸ್ ವಿದ್ಯಾಸಂಸ್ಥೆಯಲ್ಲಿ ಬುಧವಾರ ಲೋಕಾರ್ಪಣೆ ಮಾಡಿ ಮಾತನಾಡಿದರು.

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ವಿದೇಶಗಳಲ್ಲಿಯೂ ಕನ್ನಡಕ್ಕೆ ಅಪಾರ ಗೌರವ ನೀಡುತ್ತಿರುವ ಕನ್ನಡಿಗರನ್ನು ಒಂದೆಡೆ ಸೇರಿಸಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಉದ್ದೇಶವಿದೆ ಎಂದರು.

ಜಗತ್ತು ಒಂದಾಗಬೇಕಾದರೆ ಮೊದಲು ಮನುಷ್ಯರು ಒಂದಾಗಬೇಕು. ಮನುಷ್ಯನನ್ನು ನಿಜವಾದ ಮನುಷ್ಯನನ್ನಾಗಿ ರೂಪಿಸುವುದೇ ಧರ್ಮ ಮತ್ತು ಸಂಸ್ಕೃತಿ. ರಾಜಕೀಯದಲ್ಲಿರುವ ನಮ್ಮ ಹೆಸರುಗಳು ಭವಿಷ್ಯದಲ್ಲಿ ಮರೆಯಾಗಬಹುದು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಹೆಸರು ಮತ್ತು ಅವರ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ. ಶಿಕ್ಷಣ ಮತ್ತು ಸಾಹಿತ್ಯ ಜಗತ್ತಿನ ಅತ್ಯಂತ ಶಕ್ತಿಶಾಲಿ ಸಾಧನಗಳಾಗಿವೆ ಎಂದು ಹೇಳಿದರು.

ಸಾಹಿತ್ಯ ಮತ್ತು ರಾಜಕಾರಣದ ನಂಟು ಹೊಸದೇನಲ್ಲ. ಅಧಿಕಾರವನ್ನು ಬಳಸಿಕೊಂಡು ಜನರ ಬದುಕಿನಲ್ಲಿ ಬದಲಾವಣೆ ತರಬಹುದು. ಆದರೆ ಸಾಹಿತ್ಯದ ಮೂಲಕ ಜನರ ಆಲೋಚನೆಗಳನ್ನೇ ಬದಲಾಯಿಸಬಹುದು. ಅಧಿಕಾರದ ಅವಧಿ ಸೀಮಿತವಾದರೂ ಸಾಹಿತ್ಯದ ಪ್ರಭಾವ ಶಾಶ್ವತ. ಒಬ್ಬ ವ್ಯಕ್ತಿಯ ಬದುಕು ಮುಗಿದರೂ ಆತ ಬರೆದ ಚಿಂತನೆಗಳಿಗೆ ಸಾವಿಲ್ಲ ಎಂದು ಅಭಿಪ್ರಾಯಪಟ್ಟರು.

ಮನುಷ್ಯ ಬದುಕಲು ಆಹಾರ ಎಷ್ಟು ಮುಖ್ಯವೋ, ಆತ್ಮತೃಪ್ತಿಗೆ ಸಾಹಿತ್ಯ ಮತ್ತು ಕಲೆ ಅಷ್ಟೇ ಮುಖ್ಯ. ಕತ್ತಲೆಯನ್ನು ದೂರ ಮಾಡಲು ಬೆಳಕು ಬೇಕು. ಅಜ್ಞಾನವನ್ನು ದೂರ ಮಾಡಲು ಸಾಹಿತ್ಯ ಮತ್ತು ಸಂಸ್ಕೃತಿ ಬೇಕು. ಅಭಿವೃದ್ಧಿಗೆ ಸಂಪತ್ತು ಅಗತ್ಯವಾದರೆ, ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಮೌಲ್ಯಗಳು ಅಗತ್ಯ. ಸಂಸ್ಕೃತಿ ನಮ್ಮ ಗುರುತು, ಮಾನವೀಯತೆ ನಮ್ಮ ಅಸ್ತಿತ್ವ. ನಮ್ಮ ಕಾಯಕಗಳು ಬೇರೆಬೇರೆಯಾಗಿರಬಹುದು, ಆದರೆ ಮಾನವೀಯ ಭಾವನೆಗಳು ಒಂದೇ ಆಗಿರಬೇಕುಎಂದರು.

ಎಲ್ಲ ಭಾಷೆಗಳ ಸಾಹಿತ್ಯ, ಕಾವ್ಯ, ಶಾಯರಿ ಮತ್ತು ಸಂಗೀತಗಳಲ್ಲಿಯೂ ಮಾನವೀಯ ಭಾವನೆಗಳ ಅಭಿವ್ಯಕ್ತಿ ಕಾಣಬಹುದು. ಎಲ್ಲ ಧರ್ಮಗಳಲ್ಲಿಯೂ ಮಾನವೀಯತೆ ಮತ್ತು ಸಂಸ್ಕೃತಿಯನ್ನು ಬೆಸೆಯುವ ಮೌಲ್ಯಗಳಿವೆ. ಇಂತಹ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಸಾಹಿತ್ಯ ಲೋಕದ ಪಾತ್ರ ಬಹಳ ದೊಡ್ಡದು ಎಂದರು.

ವೀರಪ್ಪ ಮೊಯ್ಲಿ ಅವರ ಸಾಹಿತ್ಯಿಕ ಹಾಗೂ ರಾಜಕೀಯ ಕೊಡುಗೆಗಳು ಅಪಾರ. 1985ರಲ್ಲಿ ತಮಗೆ, ಎಚ್.ಎಂ. ರೇವಣ್ಣ, ರಾಮಲಿಂಗಾರೆಡ್ಡಿ ಸೇರಿದಂತೆ ಹಲವು ಯುವ ನಾಯಕರಿಗೆ ರಾಜೀವ್ ಗಾಂಧಿ ಅವರೊಂದಿಗೆ ಮಾತನಾಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ದೊರಕಿಸಿಕೊಡುವಲ್ಲಿ ವೀರಪ್ಪ ಮೊಯ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ರಾಜಕೀಯ ಜೀವನದಲ್ಲಿ ಹಲವು ಯುವ ನಾಯಕರಿಗೆ ಅವಕಾಶ ಕಲ್ಪಿಸಿದ ಅವರು, ಇಂದು ಸಾಹಿತ್ಯ ಲೋಕದಲ್ಲಿಯೂ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಸ್ಮರಿಸಿದರು.

ವೀರಪ್ಪ ಮೊಯ್ಲಿ ಅವರು 30ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಅವರ 'ರಾಮಾಯಣ ಮಹಾನ್ವೇಷಣಂ' ಕೃತಿಗೆ ಸರಸ್ವತಿ ಸಮ್ಮಾನ್ ಪ್ರಶಸ್ತಿ ಲಭಿಸಿದೆ. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸ ಕುರಿತಂತೆ ಅವರು ಬರೆದಿರುವ ಭಾಗವನ್ನು ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸುವಂತೆ ಮನವಿ ಮಾಡಿದ್ದೇನೆ. ಇದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅವರಿಗೆ ಜ್ಞಾನಪೀಠ ಸೇರಿದಂತೆ ಇನ್ನಷ್ಟು ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿಗಳು ಲಭಿಸಲಿ ಎಂಬುದು ನಮ್ಮೆಲ್ಲರ ಆಶಯವಾಗಿದೆ ಎಂದರು.

ಶಾಂಭವಿ ಚಕ್ಲಿ ಕೇಂದ್ರದ ಅಭಿವೃದ್ಧಿಗೆ ಕಿಲ್ಲೇಬೃಹನ್ಮಠದ ಶ್ರೀಗಳ ಆಶೀರ್ವಚನ



ರಾಯಚೂರು,ನ.11:
ನಗರದ ಲಕ್ಷ್ಮೀದೇವಿ ಕಲ್ಯಾಣ ಮಂಟಪದಲ್ಲಿ ಮುನ್ನೂರುಕಾಪು ಬಲಿಜ ಸಮಾಜದ ಅಧ್ಯಕ್ಷ ಐಬೆಲ್ಲಂ ನರಸರೆಡ್ಡಿ ಹಾಗೂ ಮಾಜಿ ಶಾಸಕರು, ಸಮಾಜದ ಹಿರಿಯರು ಹಾಗೂ ಮುಂಗಾರ ಐಸಾಂಸ್ಕೃತಿಕ ರಾಯಚೂರ ಹಬ್ಬದ ರಾಯಭಾರಿಗಳಾದ ಎ. ಪಾಪಾರೆಡ್ಡಿ ಮತ್ತು ಐಮುನ್ನೂರುಕಾಪು ಸಮಾಜದ ಸರ್ವ ಬಂಧುಗಳ ನೇತೃತ್ವದಲ್ಲಿ ಜಿಲ್ಲೆಯ ಹಿರಿಯ ಐಸಾಹಿತಿ, 2026-27 ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವೀರ ಐಹನುಮಾನರವರಿಗೆ ಹಾಗೂ ಮುನ್ನೂರುಕಾಪು ಸಮಾಜದವರೇ ಆದಂತ ಶ್ರೇಷ್ಠ ಚಿತ್ರಕಲಾ ಕಲಾವಿದ ಹೇಮರೆಡ್ಡಿಯವರಿಗೆ ಸನ್ಮಾನಐಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಮಾಜಿ ಸಚಿವರು, ಐವಿಧಾನ ಪರಿಷತ್ ಸದಸ್ಯರಾದ ಎನ್.ಎಸ್.ಭೋಸರಾಜವರು ದೀಪವನ್ನು ಪ್ರಜ್ವಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಪ್ರತೀ ವರ್ಷವು ನವೆಂಬರ್ 01 ರಂದು ಅದಾವುದೇ ಸರಕಾರವಿರಲಿ ಶ್ರೇಷ್ಠ ಸಾಧಕರನ್ನು ಗುರುತ್ತಿಸಿ ಅವರಿಗೆ ಸರಕಾರದ ಸಹಾಯವಾಗಲೆಂದು ಅತ್ಯಂತ ಗೌರವಾನ್ವಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುವುದರ ಮೂಲಕ ಅವರ ಬದುಕಿಗೆ ಅನುಕೂಲವಾಗಲೆಂದು ಗೌರವ ಧನ ಹಾಗೂ ಚಿನ್ನವನ್ನು ನೀಡಿ ಸನ್ಮಾನಿಸುವುದು ಇದು ನಮ್ಮ ಕನ್ನಡ ನಾಡಿನಲ್ಲಿ ಮೊದಲಿನಿಂದಲೂ ಬಂದಂತ ಸಂಪ್ರದಾಯವಾಗಿದೆ ಅದೇ ತರನಾಗಿ 2026-27 ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ಕೂಡ ಈ ಬಾರಿ ಜಿಲ್ಲೆಯ ಅತ್ಯಂತ ಶ್ರೇಷ್ಠ ಸುಸೌಂಸ್ಕೃತರು, ಮಾತುಂಡ ಮೌನಜ್ಞಾನಿಗಳು ಮತ್ತು ಹಿರಿಯ ಕಿರಿಯರನ್ನು ಅತ್ಯಂತ ಹತ್ತಿರದಿಂದ ಗುರುತ್ತಿಸಿ ಅವರಿಗೆ ಅಷ್ಟೇ ಗೌರವವಾಗಿ ಕಾಣುವಂತ ಮುತ್ಸದ್ದಿ ಸಾಹಿತಿ ವೀರ ಹನುಮಾನರವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದು ಜಿಲ್ಲೆಯ ಸರ್ವ ಸಾಹಿತಿಗಳಿಗೆ ಪ್ರಶಸ್ತಿ ನೀಡಿದಷ್ಟೇ ಹೆಮ್ಮೆಯ ವಿಷಯವಾಗಿದೆ, ಯಾಕೆಂದರೆ ವೀರ ಹನುಮಾನರವರು ಪ್ರಶಸ್ತಿಗೋಸ್ಕರ ಸರ್ಕಾರ ಹಾಗೆ ಅರ್ಜಿ ಹಾಕಿದವರಲ್ಲ, ಅವರು ಅರ್ಜಿಯನ್ನೂ ಹಾಕಿದ್ದಿಲ್ಲ, ತಮ್ಮ ನಿತ್ಯದ ಬರವಣಿಗೆಯ ಕಾಯಕದಲ್ಲಿ ನಿರತರಾಗಿದ್ದರು, ಅವರ ಅರ್ಜಿಯನ್ನು ಬೇರೆ ಅವರ ಗೆಳೆಯರ ಸಹಾಯದಿಂದ ಅಧಿಕಾರಿಗಳು ವೀರ ಹನುಮಾನರವರನ್ನು ಗುರುತ್ತಿಸಿ ಅರ್ಜಿಗೆ ಅವರ ಸಹಿ ಹಾಕಲಿಕ್ಕೆ ಮಾತ್ರ ಕಛೇರಿಗೆ ಒತ್ತಾಯದ ಮೂಲಕ ಕರೆಸಿ ಸರಕಾರವೇ ಇವರನ್ನು ಆಯ್ಕೆ ಮಾಡಿ ಫೋನ್ ಕರೆ ಮಾಡಿ ತಿಳಿಸಿದಾಗ ಇವರಿಗೆ ಗೊತ್ತಾಗಿದೆ,

ಯಾಕೆಂದರೆ ಆಯ್ಕೆ ಸಮಿತಿಯು ಅಷ್ಟೊಂದು ಸುಲಭವಾಗಿ ಯಾರೋ ಒಬ್ಬ ವ್ಯಕ್ತಿಗೆ ಆಯ್ಕೆ ಮಾಡುವುದಿಲ್ಲ ಆ ಪ್ರಶಸ್ತಿ ನೀಡಬೇಕಾದರೆ ಆ ವ್ಯಕ್ತಿಯಲ್ಲಿ ಆ ಕೃಷಿ ಇರಬೇಕು ಆವಾಗ ಮಾತ್ರ ಆಯ್ಕೆ ಸಮಿತಿ ಆಯ್ಕೆ ಮಾಡುತ್ತದೆ, ಅದೇ ತರವಾಗಿ ವೀರ ಹನುಮಾನರವರನ್ನು ಇಡೀ ಜಿಲ್ಲೆಯ ಸಾಹಿತಿಗಳಲ್ಲಿ ಶ್ರೇಷ್ಠ ಸಾಹಿತಿಗಳಾಗಿದ್ದಾರೆ, ಇವರು ತಮ್ಮ ಸಾಹಿತ್ಯ ಕೃಷಿಯಲ್ಲಿ ಅಲವಾರು ಕ್ಷೇತ್ರಗಳ ಅಭಿವೃದ್ಧಿ ಹೊಂದಿವೆ, ಇವರು ತಮ್ಮ ಹೈಕು ಸಾಹಿತ್ಯವು ಬಹಳ ಹರಿತವಾದ ಸಾಹಿತ್ಯವನ್ನು ಹೊಂದಿದೆ, ಹೈಕು ಸಾಹಿತ್ಯದಲ್ಲಿಯೇ ಮಾವಿನಕೆರೆ ಬಗ್ಗೆ ಬರೆದು ವರ್ಣಿಸಿದ್ದಾರೆ, ಜಗದಗಲವಿದ್ದ ಕೆರೆ ಅಂಗೈ ಹಗಲ ಹೇಗಾಯ್ತು? ಹೀಗೆ ಇಂಥ ಸಾಹಿತ್ಯಗಳು ಜಿಲ್ಲೆಯ ಕೆಲವು ಅಭಿವೃದ್ಧಿಗೆ ಕಾರಣವಾಗಿವೆ ಇಂಥವರಿಗೆ ಪ್ರಶಸ್ತಿ ನೀಡಿ ಗೌರವಿಸಿದ್ದು ತುಂಬಾ ಸಂತೋಷ ತಂದಿದೆ, ಹಾಗೆ ಮುನ್ನೂರುಕಾಪು ಸಮಾಜದವರೇ ಆದಂತ ಹೆಮರೆಡ್ಡಿಯವರೂ ಸಹಿತ ಅವರು ವಿಶೇಷ ಚೇತನರಾದರೂ ಅವರ ಚಿತ್ರ ಕಲೆಯು ಮೆಚ್ಚುವಂತಾದ್ದು ಇವರು ಈಗಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ,

ಇಂಥವರಿಗೆ ನಮ್ಮ ಪಾಪಾರೆಡ್ಡಿ, ಬೆಲ್ಲಂ ನರಸರೆಡ್ಡಿ ಹಾಗೂ ಮುನ್ನೂರುಕಾಪು ಸಮಾಜದವರ ನೇತೃತ್ವದಲ್ಲಿ ಸನ್ಮಾನವನ್ನು ಹಮ್ಮಿಕೊಂಡು ಪ್ರೋತ್ಸಾಹಿಸುವಂತ ಸಾಮಾಜಿಕ ಕಾರ್ಯವು ಶ್ಲಾಘನೀಯವಾದುದು ಎಂದು ಹೇಳಿದರು. ಐಐಮುಖ್ಯ ಅತಿಥಿಗಳಾಗಿ ಆಗಮಿಸಿದ ನಗರ ಶಾಸಕ ಡಾ. ಎಸ್. ಶಿವರಾಜ ಪಾಟೀಲ ಮಾತನಾಡಿ ಐಸಾಂಸ್ಕೃತಿಕ ರಾಯಭಾರಿ ಎಂದೇ ಪ್ರಸಿದ್ಧರಾದ ಪಾಪಾರೆಡ್ಡಿಯವರ ಸಾಮಾಜಿಕ ಕಳಕಳಿ ಮೆಚ್ಚುವಂತಾದ್ದು, ನಮ್ಮ ಜಿಲ್ಲೆಯಲ್ಲಿ ಈ ಹಿಂದೆ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನವು ರಾಜ್ಯವಲ್ಲದೇ ದೇಶಕ್ಕೆ ಹೆಸರುವಾಸಿ ಆಗಿದೆ, ಹೊರ ರಾಜ್ಯಗಳಿಂದ ಆಗಮಿಸಿದಂತ ಸರ್ವ ಸಾಹಿತಿಗಳು ಅತ್ಯಂತ ಅಚ್ಚುಕಟ್ಟಾದ ಸಾಹಿತ್ಯ ಸಮ್ಮೇಳವನ್ನು ರಾಯಚೂರು ಜಿಲ್ಲೆಯ ಜನತೆ ನೆಡೆಸಿಕೊಟ್ಟಿದ್ದಾರೆ ಎಂದು ಪತ್ರಿಕಾ ಮಾಧ್ಯಮಗಳಲ್ಲಿ ಪ್ರಚಾರ ಮಾಡಿದ್ದರು ಅದರಲ್ಲಿ ನಮ್ಮ ಪಾಪಾರೆಡ್ಡಿಯಂತಹ ಹಿರಿಯ ಮುತ್ಸದ್ದಿಗಳು ಸಹಿತ ಅವಿರತ ಶ್ರಮ ವಹಿಸಿ ಸೇವೆ ಸಲ್ಲಿಸಿದ್ದು ಮರೆಯುವಂತಿಲ್ಲ ಎಂದು ಹೇಳಿದರು. ನಂತರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವೀರ ಹನುಮಾ ನರವರು ಮಾತನಾಡಿ ನನ್ನನ್ನು ಆಹ್ವಾನಿಸಿಕೊಂಡು ಈ ಸಮಾಜದ ಹಿರಿಯರು ಐಸನ್ಮಾನಿಸಿದ್ದು ನಾನು ಸಮಾಜಕ್ಕೆ ಚಿರ ಋಣಿಯಾಗಿದ್ದೇನೆ, ಈ ಹಿಂದೆ ಪಾಪಾರೆಡ್ಡಿಯವರು ನಗರಸಭೆ ಅಧ್ಯಕ್ಷರಾಗಿದ್ದಾಗ ನಗರದ ರಾಯಚೂರ ಕೋಟೆ ಬಿಂಬಿಸುವ ಸೇವೆ ಸಲ್ಲಿಸಿದರು, ಪ್ರಸ್ತುತವಾಗಿ ಭೋಸರಾಜ ಸಾಹೇಬರು ಮಾವಿನಕೆರೆಯ ಅಭಿವೃದ್ಧಿಗೆ ಒತ್ತು ನೀಡಿರುವುದು ತುಂಬಾ ಖುಷಿ ತಂದಿದೆ, ಎ. ಪಾಪಾರೆಡ್ಡಿಯವರು ಐಯಾವುದೇ ಜಾತಿ, ಮತ, ಪಂಥ ಹಾಗೂ ಯಾವ ಧರ್ಮದವರೇ ಇರಲಿ ಅವರನ್ನು ಐಗೌರವಿಸುವುದೇ ಮುನ್ನೂರುಕಾಪು ಬಲಿಜ ಸಮಾಜದ ಕಾರ್ಯ ಮೆಚ್ಚುವಂತಾದ್ದು ಎಂದು ಹೇಳಿದರು. ಮಹಾಂತೇಶ ಮಸ್ಕಿಯವರು ಮಾತನಾಡಿ ಎ. ಪಾಪಾರೆಡ್ಡಿಯವರು ಮುಂಗಾರು ಸಾಂಸ್ಕೃತಿಕ ಹಬ್ಬವನ್ನು ಅತ್ಯಂತ ವೈಭವ ಪೇತವಾಗಿ ಆಚರಿಸುವುದಲ್ಲದೇ ಜಿಲ್ಲೆಯ ರೈತರಿಗೆ ಪ್ರೋತ್ಸಾಹ ನೀಡಿ ಗ್ರಾಮಾಂತರದ ಸೊಬಗನ್ನು ಮುಖ್ಯ ವಾಹಿನಿಗೆ ಗುರುತ್ತಿಸುವುದಲ್ಲದೇ ಹೊಸ ಹೊಸ ಪ್ರತಿಭೆಗಳಿಗೆ ವೇದಿಕೆ ಅವಕಾಶ ಕಲ್ಪಿಸಿ ನಾಡಿನ ಶ್ರೀಗಳನ್ನು ಆಹ್ವಾನಿಸಿಕೊಂಡು ರೈತರ ಹಬ್ಬವನ್ನು ದೇಶದೆಲ್ಲೆಡೆ ಪಸರಿಸುವ ಕಾರ್ಯ ಶ್ಲಾಘನೀಯವಾದುದು ಎಂದು ಹೇಳಿದರು, ಎ. ಪಾಪಾರೆಡ್ಡಿಯವರು ಮುಂಗಾರು ಸಾಂಸ್ಕೃತಿಕ ಹಬ್ಬಕ್ಕೆ ಬೆಲ್ಲಂ ನರಸರೆಡ್ಡಿ ಹಾಗೂ ಮುನ್ನೂರುಕಾಪು ಸಮಾಜವೇ ನಿಂತು ಸೇವೆ ಸಲ್ಲಿಸುತ್ತಿರುವುದು ಜಿಲ್ಲೆಗೆ ಕಿರಿಟವಿದ್ದಂತೆ ಎಂದು ಹೇಳಿದರು. ಐಐನಂತರ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪನವರು ವೀರ ಹನುಮಾನರವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತದ್ದು ಪ್ರಶಸ್ತಿಗೆ ಗೌರವ ಸಿಕ್ಕಂತಾಗಿದೆ ಎಂದು ಹೇಳಿದರು. ಹಿರಿಯ ಪತ್ರಕರ್ತರಾದ ಕೆ. ಸತ್ಯನಾರಾಯ ಣರವರು ಕಾರ್ಯಕ್ರಮವನ್ನು ನಿರೂಪಿಸಿದರು, ಪ್ರತಿಭಾ ಗೋನಾಳರವರು ಪ್ರಾರ್ಥನೆ ಗೀತೆ ಪ್ರಸ್ತುತ ಪಡಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮಾಜಿ ಹಿರಿಯ ಸದಸ್ಯರಾದ ಜಯಣ್ಣ, ಶಾಲಂ ಪಾಷಾ, ಬಂಗಿ ನರಸರೆಡ್ಡಿ, ಎನ್. ಶ್ರೀನಿವಾಸರೆಡ್ಡಿ, ಜಿ. ಶೇಖರರೆಡ್ಡಿ, ಎನ್. ಶ್ರೀನಿವಾಸರೆಡ್ಡಿ, ಗುಡ್ಡಿ ನರಸರೆಡ್ಡಿ, ಗುಡ್ಡಿ ಪ್ರತಾಪರೆಡ್ಡಿ, ಎನ್. ಭೀಮರೆಡ್ಡಿ, ಮಹೇಂದ್ರ ರೆಡ್ಡಿ, ರಾಜಕುಮಾರ, ಗಣೇಶ, ಪುಂಡ್ಲ ರಾಜೇಂದ್ರ ರೆಡ್ಡಿ, ಡಾ. ಶರಣಪ್ಪ ಗೋನಾಳ, ಟಿ. ಮಲ್ಲೇಶಪ್ಪ, ಬಾಬು ಬಂಡಾರಿಗಲ, ಹೆಚ್.ಎಸ್. ಮ್ಯಾದಾರ, ಗಧಾರ ಬೆಟ್ಟಪ್ಪ, ಯು. ಕೃಷ್ಣಮೂರ್ತಿ ಹಾಗೂ ಮುನ್ನೂಕಾಪು ಬಲಿಜದ ಸಮಾಜದ ಸರ್ವ ಹಿರಿಯರು ಮತ್ತು ಯುವಕ ಮಂಡಳಿ ಮುನ್ನೂರಕಾಪು ಶಿಕ್ಷಣ ಸಂಸ್ಥೆಯ ಶಿಕ್ಷಕ ವೃಂಧ ಮತ್ತು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಏಡ್ಸ್ ಜಾಗೃತಿ ಅಭಿಯಾನ: ಬೀದಿನಾಟಕ ಪ್ರದರ್ಶನ



ಕುಂದಾಪುರ, ನ.11:
ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಕುಂದಾಪುರ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ರೋಟರಿ ಕ್ಲಬ್ ಸನ್ರೈಸ್ ಹಾಗೂ ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್ ಇವರ ಸಂಯುಕ್ತ ಆಶ್ರಯದಲ್ಲಿ ಎಚ್‌ಐವಿ/ಏಡ್ಸ್ ತಡೆಗಟ್ಟುವಿಕೆ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳು ಕುಂದಾಪುರದಲ್ಲಿ ಫ್ಲ್ಯಾಶ್ ಮಾಬ್ ಮತ್ತು ಬೀದಿ ನಾಟಕದ ಮೂಲಕ ವಿಶೇಷ ಜಾಗೃತಿ ಅಭಿಯಾನ ನಡೆಸಿದರು.

ಕಾರ್ಯಕ್ರಮವನ್ನು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹಿರಿಯ ಸ್ತ್ರೀರೋಗ ತಜ್ಞ ಡಾ.ಚಂದ್ರ ಮರಕಾಲ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಕುಂದಾಪುರ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ್ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಜಯಕರ್ ಶೆಟ್ಟಿ, ರೋಟರಿ ಕ್ಲಬ್ ಸನ್ರೈಸ್‌ನ ಪೂರ್ಣಿಮಾ ರವಿಶಂಕರ್, ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್‌ನ ಉಪಪ್ರಾಂಶುಪಾಲ ರೂಪಶ್ರೀ ಕೆ.ಎಸ್. ಹಾಗೂ ಕುಂದಾಪುರ ತಾಲೂಕು ಆಸ್ಪತ್ರೆಯ ಆಪ್ತ ಸಮಾಲೋಚಕ ನಳಿನಾಕ್ಷಿ ಉಪಸ್ಥಿತರಿದ್ದರು. ಕುಂದಾಪುರದ ಸರಕಾರಿ ಪದವಿಪೂರ್ವ ಕಾಲೇಜು ಉಪನ್ಯಾಸಕಿ ಸಂಧ್ಯಾ ಸ್ವಾಗತಿಸಿದರು.

ಮೂಡ್ಲಕಟ್ಟೆ ಕಾಲೇಜ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳು ಕುಂದಾಪುರದ ಸರಕಾರಿ ಪದವಿಪೂರ್ವ ಕಾಲೇಜು, ಹೊಸ ಬಸ್ ನಿಲ್ದಾಣ, ಪುರಸಭೆ ಹಾಗೂ ಸಂತೆ ಮಾರುಕಟ್ಟೆಗಳಲ್ಲಿ ಫ್ಲ್ಯಾಶ್ಮಾಬ್ ಮತ್ತು ಬೀದಿ ನಾಟಕ ಪ್ರದರ್ಶಿಸಿದರು. ಈ ಮೂಲಕ ಎಚ್‌ಐವಿ ಹರಡುವ ವಿಧಾನಗಳು, ತಡೆಗಟ್ಟುವ ಕ್ರಮಗಳು, ಆರಂಭಿಕ ಪರೀಕ್ಷೆ, ಚಿಕಿತ್ಸೆ ಹಾಗೂ ಸಮಾಲೋಚನೆಯ ಮಹತ್ವದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಸೆಂಟ್ರಲ್ ಕ್ಲಸ್ಟರ್ ಕಿಚನ್ ರಚನೆ ಕೈಬಿಡಲು ಆಗ್ರಹ



ದೇವದುರ್ಗ 11:
ಬಿಸಿಯೂಟ ಸಿಬ್ಬಂದಿಯ ನೌಕರಿ ಕಸಿಯುವ ಸೆಂಟ್ರಲ್ ಕ್ಲಸ್ಟರ್ ಕಿಚನ್ ರಚನೆ ಕೈಬಿಟ್ಟು ಅಡುಗೆ ಸಿಬ್ಬಂದಿಗೆ ಊಟದ ಸಂಪೂರ್ಣ ಜವಾಬ್ದಾರಿ ವಹಿಸಲು ಒತ್ತಾಯಿಸಿ ಪಟ್ಟಣದಲ್ಲಿ ಬಿಇಒ ರಾಧಾದೇವಿಗೆ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು ಸಂಯೋಜಿತ) ಬುಧವಾರ ಮನವಿ ಸಲ್ಲಿಸಿತು.

ಬಿಸಿಯೂಟ ಯೋಜನೆಯಡಿ ಕ್ಲಸ್ಟರ್ ಕಿಚನ್ ರಚಿಸಲು ಶಿಕ್ಷಣ ಇಲಾಖೆ ಆದೇಶ ನೀಡಿದೆ. ಬಿಸಿಯೂಟ ಯೋಜನೆ 2001ರಿಂದ ಜಾರಿಯಲ್ಲಿದ್ದು ಸರ್ಕಾರಿ ಶಾಲೆ ಮಕ್ಕಳ ಹಸಿವು ನೀಗಿಸಿ ಗ್ರಹಿಕೆಯ ಶಕ್ತಿ ಮತ್ತು ಹಾಜರಾತಿ ಹೆಚ್ಚಿಸಿದೆ. 6ವರ್ಷ ಮೇಲ್ಪಟ್ಟ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ಮಕ್ಕಳು ಇರುವ ಸ್ಥಳದಲ್ಲೆ ಬೇಯಿಸಿ ತಾಜಾ ಆಹಾರ ಕೊಡಬೇಕು ಎಂಬ ಸುಪ್ರೀಂ ಕೋರ್ಟ್ನ ಆದೇಶವಿದೆ. ಇದರ ಆಧಾರದಲ್ಲಿ ಸಾವಿರಾರು ಕೋಟಿ ವೆಚ್ಚಮಾಡಿ ಶಾಲೆಯಲ್ಲಿ ಅಡುಗೆಕೋಣೆ ನಿರ್ಮಿಸಿ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲಾಗಿದೆ. ಆದರೆ, ಸರ್ಕಾರ ಕ್ಲಸ್ಟರ್ ಕಿಚನ್ ಆರಂಭಿಸಲು ಮುಂದಾಗಿರುವುದು ಸರಿಯಲ್ಲ ಎಂದು ದೂರಿದರು. ಕೂಡಲೇ ಬಿಸಿಯೂಟ ಯೋಜನೆ ಮುಖ್ಯಶಿಕ್ಷಕರಿಗೆ ವಹಿಸದೆ ಅಡುಗೆ ಸಿಬ್ಬಂದಿಗೆ ಕೊಡಬೇಕು.

ಅಡುಗೆ ಸಿಬ್ಬಂದಿ, ಎಸ್ಡಿಎಂಸಿ ಅಧ್ಯಕ್ಷರೆ ಜಂಟಿ ಖಾತೆಯಲ್ಲಿ ವ್ಯವಹಾರ ನಡೆಸಬೇಕು. ಅಗತ್ಯವಿದ್ದರೆ ಅಡುಗೆಯವರ ಕೆಲಸದ ಅವಧಿ ವಿಸ್ತರಿಸಲು ಅವಕಾಶ ನೀಡಬೇಕು. ಬಿಸಿಯೂಟ ಸಿಬ್ಬಂದಿ ಅಡುಗೆ ತಯಾರಿಸುವ ಕಾರ್ಯಮುಂದುವರಿಸಬೇಕು. ಸೆಂಟ್ರಲ್ ಕ್ಲಸ್ಟರ್ ಕಿಚನ್ ಧಾರ್ಮಿಕ, ಜಾತಿಗಳ ಮತ್ತು ಖಾಸಗಿಯವರ ಪಾಲು ಮಾಡಲು ರಹದಾರಿ ಯಾಗಿದ್ದು ತಕ್ಷಣವೇ ಕ್ಲಸ್ಟರ್ ಕಿಚನ್ ಪದ್ಧತಿ ಕೈಬಿಡಬೇಕು ಎಂದು ಒತ್ತಾಯಿಸಿದರು. ಐಟಿಯು ಮುಖಂಡರಾದ ಗಿರಿಯಪ್ಪ ಪೂಜಾರಿ, ಅಧ್ಯಕ್ಷೆ ಮರಿಯಮ್ಮ, ಕಾರ್ಯದರ್ಶಿ ಶ್ರೀಲೇಖಾ, ಲಕ್ಷ್ಮಿ, ಮಂಜುಳಾ, ರತ್ನಮ್ಮ ಇತರರಿದ್ದರು. 11:ಐಸೆಂಟ್ರಲ್ ಕ್ಲಸ್ಟರ್ ಕಿಚನ್ ರಚನೆ ಕೈಬಿಡುವಂತೆ ಒತ್ತಾಯಿಸಿ ದೇವದುರ್ಗದಲ್ಲಿ ಬಿಇಒ ರಾಧಾದೇವಿಗೆ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘ ಮನವಿ ಸಲ್ಲಿಸಿತು. ಗೌರವ ಅಧ್ಯಕ್ಷ ಗಿರಿಯಪ್ಪ ಪೂಜಾರಿ, ಅಧ್ಯಕ್ಷೆ ಮರಿಯಮ್ಮ, ಕಾರ್ಯದರ್ಶಿ ಶ್ರೀಲೇಖಾ, ಲಕ್ಷ್ಮಿ, ಮಂಜುಳಾ, ರತ್ನಮ್ಮ ಇತರರಿದ್ದರು.

ನವೆಂಬರ ಅಂತ್ಯದೊಳಗೆ ಪಡಿತರ ಚೀಟಿದಾರರು ಇ-ಕೆವೈಸಿ ಕಾರ್ಯ ಕಡ್ಡಾಯವಾಗಿ ಪೂರ್ಣಗೊಳಿಸಲು ಆಹಾರ ಇಲಾಖೆಯಿಂದ ಸೂಚನೆ

ರಾಯಚೂರು
ರಾಯಚೂರು ಜಿಲ್ಲೆಯ ಎಲ್ಲಾ ಪಡಿತರ ಚೀಟಿಯಲ್ಲಿನ ಸದಸ್ಯರ ಇ-ಕೆವೈಸಿಯನ್ನು ಪ್ರತಿ 5 ವರ್ಷಗಳಿಗೊಮ್ಮೆ ಮಾಡಿಸುವುದು ಕಡ್ಡಾಯವಾಗಿ ಮಾಡಬೇಕಾಗಿದೆ. ಪ್ರಸ್ತುತ ಜಿಲ್ಲೆಯಲ್ಲಿ 05 ವರ್ಷ ಪೂರೈಸಿದ 9,50,029 ಫಲಾನುಭವಗಳ ಪೈಕಿ 7,86,143 ಫಲಾನುಭವಿಗಳ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಇನ್ನೂ 1,63,886 ಫಲಾನುಭವಿಗಳ ಇ-ಕೆವೈಸಿ ಪ್ರಕ್ರಿಯೆ ಬಾಕಿ ಉಳಿದಿರುತ್ತದೆ. ಬಾಕಿ ಇರುವ ಫಲಾನುಭವಿಗಳ ಪ್ರಕ್ರಿಯೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ನ್ಯಾಯಬೆಲೆ ಅಂಗಡಿ ಡೀಲರರುಗಳಿಗೆ ಸೂಚಿಸಲಾಗಿದೆ.

ಬಾಕಿ ಇರುವ ಫಲಾನುಭವಿಗಳು ತಮಗೆ ಜೋಡಣೆಯಾದ ನ್ಯಾಯಬೆಲೆ ಅಂಗಡಿಗೆ ಖುದ್ದು ಭೇಟಿ ನೀಡಿ ಕಡ್ಡಾಯವಾಗಿ ಇ-ಕೆವೈಸಿಯನ್ನು ಮಾಡಿಸುವಂತೆ ಮತ್ತು ಸರ್ಕಾರವು ಈಗಾಗಲೇ ಇ-ಕೆವೈಸಿ ಪ್ರಕ್ರಿಯೆಗಾಗಿ ಅನ್ನ ಸೇವೆ ಮೊಬೈಲ್ ಆ್ಯಪ್ ಮುಖಾಂತರ ಇ-ಕೆವೈಸಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇ-ಕೆವೈಸಿ ಪ್ರಕ್ರಿಯೆಯು ಸಂಪೂರ್ಣ ಉಚಿತವಾಗಿದ್ದು, ಇದಕ್ಕಾಗಿ ಯಾವುದೇ ಶುಲ್ಕ ಪಾವತಿಸುವಂತಿಲ್ಲ.

ಬಾಕಿ ಇರುವ ಫಲಾನುಭವಿಗಳು ಇ-ಕೆವೈಸಿ ಪೂರ್ಣಗೊಳಿಸಲು ನವಂಬರ್ 30 ಕೊನೆಯ ದಿನವಾಗಿದೆ.

ಒಂದು ವೇಳೆ ಫಲಾನುಭವಿಗಳು ಇ-ಕೆವೈಸಿ ಮಾಡಿಸದೆ ಇದ್ದಲ್ಲಿ ಮುಂದಿನ ದಿನಗಳಲ್ಲಿ ಪಡಿತರ ಚೀಟಿಯಲ್ಲಿ ಅಂತಹ ಫಲಾನುಭವಿಗಳ ಹೆಸರನ್ನು ತೆಗೆಯಲು ಕ್ರಮವಹಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಿಕೆ
ಓದುವ
ಹವ್ಯಾಸ
ಬೆಳೆಸಿಕೊಳ್ಳಿ

ಅವರಿವರಿಗೆ ಬೈಯುವುದನ್ನು ಬಿಟ್ಟು, ರೈತರ ಸಭೆ ನಡೆಸಲು ಸಚಿವರಿಗೆ ಧಮ್ ಇಲ್ಲವೇ ಪ್ರಿಯಾಂಕ್ ಖರ್ಗೆ ವಿರುದ್ಧ ಮಾಶ್ಯಾಳ ಮಠದ ಸ್ವಾಮೀಜಿ ಏಕವಚನದಲ್ಲಿ ವಾಗ್ದಾಳಿ!

ಚೌಡಾಪುರ (ಕಲಬುರಗಿ): ಕಲಬುರಗಿ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸಿದಂತೆ ಮಾಶ್ಯಾಳ ಮಠದ ಮರುಳಾರಾಧ್ಯ ಸ್ವಾಮೀಜಿ ಅವರು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಏಕವಚನದಲ್ಲಿ ಆಕ್ಷೇಪಾರ್ಹ ಪದ ಬಳಸಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕಬ್ಬು ಬೆಳೆಗಾರರ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಸ್ವಾಮೀಜಿಯವರು, ರಾಜ್ಯಾದ್ಯಂತ ರೈತರು ಕಬ್ಬಿನ ಬೆಲೆ ನಿಗದಿಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಹಿನ್ನೆಲೆಯಲ್ಲಿ, ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಕನಿಷ್ಠ ಒಂದು ಸಭೆಯನ್ನೂ ನಡೆಸದ ಖರ್ಗೆಯವರನ್ನು "ಬೇರೆ ವಿಷಯಗಳಿದ್ದರೆ ತಕ್ಷಣ ಪ್ರತಿಕ್ರಿಯೆ ನೀಡುವ ಅವರು, ರೈತರ ವಿಚಾರ ಬಂದಾಗ ಊಟ ಮಾಡಿ ಮಲಗಿದ್ದಾರಾ ರೈತರ ಸಮಸ್ಯೆ ಬಗೆಹರಿಸಲು ಅಥವಾ ಸಭೆ ನಡೆಸಲು ಅವರಿಗೆ ಧಮ್ ಇಲ್ಲವೇ" ಎಂದು ಸ್ವಾಮೀಜಿ ಆಕ್ಷೇಪಾರ್ಹ ಏಕವಚನದ ಪದ ಬಳಸಿ ಪ್ರಶ್ನಿಸಿದ್ದಾರೆ.



ಸಭೆ ನಡೆಸಲು ಧಮ್ ಇಲ್ಲವೇ

ಅಫಜಲಪುರ ತಾಲೂಕಿನ ಚೌಡಾಪುರದಲ್ಲಿ ನಡೆದ ಕಬ್ಬು ಬೆಳೆಗಾರರ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಮಾಶ್ಯಾಳ ಮಠದ ಮರುಳಾರಾಧ್ಯ ಸ್ವಾಮೀಜಿ ಅವರು, "ರಾಜ್ಯಾದ್ಯಂತ ರೈತರು

ಕಬ್ಬಿನ ಬೆಲೆ ನಿಗದಿಗೆ ಆಗ್ರಹಿಸಿ ಊಟ, ನಿದ್ದೆ ಬಿಟ್ಟು ಪ್ರತಿಭಟನೆ ಮಾಡುತ್ತಿದ್ದಾರೆ. ಇಷ್ಟಾದರೂ ಕಲಬುರಗಿಯಲ್ಲಿ ಈವರೆಗೆ ಒಂದೇ ಒಂದು ಸಭೆ ನಡೆಸಿಲ್ಲ ಎಂದರೆ ಏನರ್ಥ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಎಲ್ಲರೂ ಡಿಸಿ, ಶಾಸಕರ ಹೆಸರು ಹೇಳುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರೇನು ಕೇವಲ ಉಂಡು ಮಲಗೋಕೆ ಇದ್ದಾರಾ ರೈತರ ಸಮಸ್ಯೆ ಬಗೆಹರಿಸಲು, ಸಭೆ ಮಾಡೋಕೆ ನಿಮ್ಮ ಕು... ಡ್ಯಾಗ್ ಧಮ್ ಇಲ್ಲೇನು" ಎಂದು ತೀವ್ರ ಧಾಟಿಯಲ್ಲಿ ಪ್ರಶ್ನಿಸಿದ್ದಾರೆ.

ಅವರಿವರಿಗೆ ಬೈಯುವುದನ್ನು ಬಿಡಿ "ದೊಡ್ಡ ಸ್ಥಾನದಲ್ಲಿದ್ದುಕೊಂಡು ರೈತರಿಗೆ ಮತ್ತು ಸಾರ್ವಜನಿಕರಿಗೆ ಉಪಯೋಗವಾಗುವಂತಹ ಕೆಲಸ ಮಾಡುವುದನ್ನು ಬಿಟ್ಟು, ದಿನ ಬೆಳಾದರೆ ಅವರಿವರಿಗೆ ಬೈಯುತ್ತಾ ಕೂರುವುದನ್ನು ಸಚಿವರು ಬಿಡಬೇಕು. ಕೆಲಸಕ್ಕೆ ಬಾರದ ಮಾತುಗಳನ್ನು ಆಡುವ ಬದಲು ರೈತರ ಸಮಸ್ಯೆ ಎದುರಾದಾಗ ತಮ್ಮ ಧಮ್ ತೋರಿಸಲಿ" ಎಂದು ಸ್ವಾಮೀಜಿ ಏಕವಚನದಲ್ಲಿಯೇ ತರಾಟೆಗೆ ತೆಗೆದುಕೊಂಡಿದ್ದಾರೆ.

ಮುಂದುವರೆದು, ಜಿಲ್ಲೆಯಲ್ಲಿ ಕಬ್ಬಿಗೆ ಸೂಕ್ತ ಬೆಲೆ ಸಿಗದೆ ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರಿಂದ ರೈತರಿಗೆ ಅನ್ಯಾಯವಾಗುತ್ತಿರುವುದನ್ನು ಖಂಡಿಸಿ ಚೌಡಾಪುರ ಭಾಗದಲ್ಲಿ ರೈತರು ನಡೆಸುತ್ತಿದ್ದ ಬೃಹತ್ ಧರಣಿ ಸತ್ಯಾಗ್ರಹದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ಹಣ ಗಳಿಸಲು ದುಷ್ಕೃತ್ಯ: ಬಾಲಕನಿಗೆ ಮದ್ಯ ಕುಡಿಸಿ ಕೊಂದು ಅಂಗಾಂಗ ಹೊರತೆಗೆದ ಆರೋಪಿ ಅರೆಸ್ಟ್

ಜಶಪುರ(ಛತ್ತೀಸ್‌ಗಢ):

ಛತ್ತೀಸ್‌ಗಢದ ಜಶಪುರ ಜಿಲ್ಲೆಯಲ್ಲಿ, ಸಂಬಂಧಿಕರ ಮಗನನ್ನು ಕೊಂದು, ಅಂಗಾಂಗಗಳನ್ನು ಹೊರತೆಗೆದು ಮಾರಾಟ ಮಾಡುವ ಮೂಲಕ ಸುಲಭವಾಗಿ ಹಣ ಗಳಿಸಲು ಯತ್ನಿಸಿದ ಆರೋಪದ ಮೇಲೆ ಯುವಕನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಜಶಪುರದ ಸನ್ನಾ ಪೊಲೀಸರು, 5 ವರ್ಷದ ಬಾಲಕ ಜಿತೇಂದ್ರ ರಾಮ್‌ನ ಬರ್ಬರ ಹತ್ಯೆ ಪ್ರಕರಣವನ್ನು ಭೇದಿಸಿದ್ದು, ಬಸುದೇವ್ (ಅಲಿಯಾಸ್ ತಂಗು) ಎಂಬಾತನನ್ನು ಬಂಧಿಸಿದ್ದಾರೆ. ಲೋಧೇನಾಪಥ ಮಹುವಾ ನಿವಾಸಿ ರಾಮ್‌ಜಿತ್ ರಾಮ್ ಎಂಬುವರು ನವೆಂಬರ್ 7ರಂದು ತಮ್ಮ ಮಗ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಿದ್ದರು.

ಪೊಲೀಸರ ಪ್ರಕಾರ, ಆರೋಪಿಯು ಬಾಲಕನನ್ನು ಆಮಿಷವೊಡ್ಡಿ ಕರೆದೊಯ್ದು, ಮದ್ಯಪಾನ ಮಾಡಿಸಿ, ನಂತರ ಕುತ್ತಿಗೆಯನ್ನು ಸೀಳಿ ಕೊಲೆ ಮಾಡಿದ್ದಾನೆ. ಬಳಿಕ, ಅಂಗಾಂಗಗಳನ್ನು ತೆಗೆದು ಮಾರುವ ಉದ್ದೇಶದಿಂದ ಬಾಲಕನ ದೇಹದ ಭಾಗಗಳನ್ನು ಬೇರ್ಪಡಿಸಿದ್ದಾನೆ. ಮೂತ್ರಪಿಂಡಗಳು, ಶ್ವಾಸಕೋಶಗಳು ಮತ್ತು ಕಣ್ಣುಗಳನ್ನು ಹೊರತೆಗೆದಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ.

ದೂರಿನಲ್ಲಿ ತಿಳಿಸಿರುವಂತೆ, ರಾಮ್‌ಜಿತ್ ರಾಮ್ ಸುಮಾರು ಒಂದು ವರ್ಷದ ಹಿಂದೆ ಕೂಲಿ ಕೆಲಸಕ್ಕಾಗಿ ತಮ್ಮ ಕುಟುಂಬದೊಂದಿಗೆ ಸನ್ನಾ ಗ್ರಾಮಕ್ಕೆ ಬಂದು, ಅಣೆಕಟ್ಟಿನ ಬಳಿಯ ಗುಡಿಸಲೊಂದರಲ್ಲಿ ವಾಸಿಸುತ್ತಿದ್ದರು. ಇವರ ಸಂಬಂಧಿ ಹಾಗೂ ಗೊರ್ರಾಪಥ ಗ್ರಾಮದ ನಿವಾಸಿಯಾದ ಬಸುದೇವ್, ಆಗಾಗ್ಗೆ ಇವರ ಮನೆಗೆ ಭೇಟಿ ನೀಡುತ್ತಿದ್ದ. ನವೆಂಬರ್ 5ರಂದು ಬೆಳಗ್ಗೆ ಸುಮಾರು 9 ಗಂಟೆಗೆ, ಆರೋಪಿ ಬಸುದೇವ್ ಅವರ ಮನೆ ಬಳಿ ಬಂದು, ರಾಮ್‌ಜಿತ್ ಮತ್ತು ಇನ್ನೊಬ್ಬ ಪರಿಚಯಸ್ಥನನ್ನು ಮದ್ಯಪಾನ ಮಾಡಲು ಕರೆದೊಯ್ದಿದ್ದಾನೆ. ಬಳಿಕ ರಾಮ್‌ಜಿತ್ ಮತ್ತು ಆ ಇನ್ನೊಬ್ಬ ವ್ಯಕ್ತಿ ಬಸ್ ನಿಲ್ದಾಣದ ಕಡೆಗೆ ಹೋಗಿದ್ದು, ಆರೋಪಿ ಬಸು ದೇವ್ ಬಾಲಕನ ಕುಟುಂಬವು ವಾಸವಿದ್ದ ಗುಡಿಸಲಿನತ್ತ ತೆರಳಿದ್ದ. ರಾಮ್‌ಜಿತ್ ತನ್ನ ಗುಡಿಸಲಿಗೆ ಹಿಂತಿರುಗಿದಾಗ, ಬಾಲಕ ಜಿತೇಂದ್ರ ಅಲ್ಲಿ ಇರಲಿಲ್ಲ. ಬಳಿಕ ಕುಟುಂಬದವರು ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದಾರೆ. ಈ ಸಮಯದಲ್ಲಿ, ವ್ಯಕ್ತಿಯೊಬ್ಬರು ಬಾಲಕ ಬಸುದೇವ್‌ನೊಂದಿಗೆ ಹೋಗುವುದನ್ನು ಕಂಡಿದ್ದಾಗಿ ತಿಳಿಸಿದ್ದಾರೆ. ಕುಟುಂಬದವರು ಹತ್ತಿರದ ಹಳ್ಳಿಗಳು ಮತ್ತು ಹೊಲಗಳಲ್ಲಿ ತೀವ್ರವಾಗಿ ಹುಡುಕಾಟ ನಡೆಸಿದರೂ ಪತ್ತೆಯಾಗಲಿಲ್ಲ.



ನವೆಂಬರ್ 7ರ ಬೆಳಗ್ಗೆ ರಾಮ್‌ಜಿತ್ ಮತ್ತು ಅವರ ಕುಟುಂಬದವರು ಮತ್ತೆ ಹುಡುಕಾಟ ಮಾಡಿದ್ದಾರೆ. ಈ ವೇಳೆ, ಗ್ರಾಮಸ್ಥರೊಬ್ಬರು ಹೊಲದ ಬಳಿಯಿದ್ದ ನೀರಿನ ಗುಂಡಿಯಲ್ಲಿ ಚೀಲವೊಂದನ್ನು ಗಮನಿಸಿದ್ದಾರೆ. ಆ ಚೀಲದೊಳಗೆ, ಕಂಬಳಿ ಮತ್ತು ಹೊದಿಕೆಯಲ್ಲಿ ಸುತ್ತಿ, ಮಣ್ಣಿನಿಂದ ಭಾಗಶಃ ಮುಚ್ಚಲ್ಪಟ್ಟಿದ್ದ ಬಾಲಕನ ಮೃತದೇಹ ಪತ್ತೆಯಾಯಿಗಿದೆ. ವಿಷಯ ತಿಳಿದ ಕೂಡಲೇ ಜಶಪುರ ಪೊಲೀಸರು ಸ್ಥಳಕ್ಕೆ ಆಗಮಿಸಿ ತನಿಖೆ ಕೈಗೊಂಡಿದ್ದು, ಶಂಕಿತ ವಾಸುದೇವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಬೆಳಕಿಗೆ ಬಂದಿದೆ.

ವಿಚಾರಣೆ ವೇಳೆ, ತಾನು ಸುಮಾರು ಒಂದು ವರ್ಷದ ಹಿಂದೆ ಕೂಲಿ ಕೆಲಸಕ್ಕಾಗಿ ಸನ್ನಾ ಗ್ರಾಮಕ್ಕೆ ಬಂದಿದ್ದಾಗಿ ಆರೋಪಿ ತಿಳಿಸಿದ್ದಾನೆ. ವ್ಯಕ್ತಿಯೊಬ್ಬರ ಜಮೀನಿನಲ್ಲಿ ತರಕಾರಿ ಬೆಳೆಯುವ ಕೆಲಸಕ್ಕೆ ಸೇರಿಕೊಂಡಿದ್ದು, ಅಲ್ಲಿಯೇ ಗುಡಿಸಲೊಂದರಲ್ಲಿ ವಾಸಿಸುತ್ತಿದ್ದ. ಆರೋಪಿಯು ಹೆಚ್ಚು ಹಣ ಸಂಪಾದಿಸುವ ಆಸೆಯಿಂದ, ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಹುಡುಕಾಡಿದ್ದಾನೆ. ಆಗ ಚಿಕ್ಕ ಮಕ್ಕಳ ದೇಹದ ಅಂಗಗಳನ್ನು ತೆಗೆದು ಮಾರಾಟ ಮಾಡುವ ಆಲೋಚನೆ ಆತನಿಗೆ ಹೊಳೆದಿದೆ. ನವೆಂಬರ್ 5ರ ಬೆಳಗ್ಗೆ, ಕೆಲಸಕ್ಕೆ ಹೋಗುವ ದಾರಿಯಲ್ಲಿ ತಾನು ರಾಮ್‌ಜಿತ್ ಎಂಬವರ ಮನೆಯ ಬಳಿ ಹಾದುಹೋಗಿದ್ದಾಗಿ ಆರೋಪಿ ಪೊಲೀಸರಿಗೆ ತಿಳಿಸಿದ್ದಾನೆ.

ಅಲ್ಲಿ ರಾಮ್‌ಜಿತ್ ಮತ್ತು ಇನ್ನೊಬ್ಬ ಪರಿಚಯಸ್ಥನೊಂದಿಗೆ ಮದ್ಯಪಾನ ಮಾಡಿದ ನಂತರ, ಅವರಿಂದ ಬೇರ್ಪಟ್ಟು ವಾಪಸಾಗುತ್ತಿದ್ದ. ದಾರಿಯಲ್ಲಿ ಜಿತೇಂದ್ರ ಎಂಬ ಬಾಲಕ ಸಿಕ್ಕಾಗ, ಆಮಿಷವೊಡ್ಡಿ ಜಮೀನಿನಲ್ಲಿದ್ದ ಗುಡಿಸಲಿಗೆ ಕರೆದೊಯ್ದಿದ್ದಾನೆ. ನಂತರ ಬಾಲಕನನ್ನು ಸನ್ನಾ ಖುಟಾತಂಗರ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಮದ್ಯ ಮತ್ತು ಕೋಳಿಯನ್ನು ಖರೀದಿಸಿದ್ದಾನೆ. ಹಿಂತಿರುಗಿದ ಬಳಿಕ ಕೋಳಿ ಮಾಂಸವನ್ನು ಅಡುಗೆ ಮಾಡಿ, ಬಾಲಕನಿಗೆ ಸ್ವಲ್ಪ ಮದ್ಯ ಕುಡಿಸಿದ್ದಾನೆ ನಂತರ ಬಾಲಕ ನಿದ್ರೆಗೆ ಜಾರಿದ್ದು, ಈ ಸಂದರ್ಭದಲ್ಲಿ ಚಾಕುವಿನಿಂದ ಕುತ್ತಿಗೆಯನ್ನು ಸೀಳಿ ಹತ್ಯೆ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕನನ್ನು ಕೊಂದ ನಂತರ, ಅದೇ ಚಾಕುವಿನಿಂದ ಎದೆ ಮತ್ತು ಹೊಟ್ಟೆಯನ್ನು ಸೀಳಿ, ಮೂತ್ರಪಿಂಡಗಳು, ಶ್ವಾಸಕೋಶಗಳು ಮತ್ತು ಕಣ್ಣುಗಳನ್ನು ಹೊರತೆಗೆದಿದ್ದಾನೆ. ಈ ಅಂಗಗಳನ್ನು ಪ್ಲಾಸ್ಟಿಕ್ ಬಕೆಟ್‌ವೊಂದರಲ್ಲಿ ಹಾಕಿದ್ದಾನೆ. ನಂತರ ಮೃತದೇಹವನ್ನು ಹೊದಿಕೆ ಮತ್ತು ರಜಾಯಿಯಲ್ಲಿ ಸುತ್ತಿ, ಚೀಲವೊಂದರಲ್ಲಿ ತುಂಬಿ, ನೀರಿನ ಗುಂಡಿಯಲ್ಲಿ ಹೂತುಹಾಕಿದ್ದ. ಅಪರಾಧ ಮುಚ್ಚಿಹಾಕಲು ಕೃತ್ಯಕ್ಕೆ ಬಳಸಿದ ಚಾಕು, ಸಲಿಕೆ ಮತ್ತು ಅಂಗಾಂಗಗಳಿದ್ದ ಬಕೆಟ್ ಅನ್ನು ಬಿದಿರು ಪೊದೆಯ ಸಮೀಪ ಗುಂಡಿ ತೋಡಿ ಹೂತುಹಾಕಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಆರೋಪಿ ಬಸುದೇವ್ ನೀಡಿದ ಮಾಹಿತಿಯ ಮೇರೆಗೆ, ಪೊಲೀಸರು ಬಾಲಕನ ಮೃತದೇಹ, ಹತ್ಯೆಗೆ ಬಳಸಿದ ಚಾಕು, ಸಲಿಕೆ, ಪ್ಲಾಸ್ಟಿಕ್ ಬಕೆಟ್‌ನಲ್ಲಿದ್ದ ಅಂಗಾಂಗಗಳು ಮತ್ತು ಆತನ ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದಾರೆ. "ಆರೋಪಿಯು ಸಾಮಾಜಿಕ ಜಾಲತಾಣಗಳಲ್ಲಿ ತ್ವರಿತವಾಗಿ ಹಣ ಗಳಿಸುವ ಮಾರ್ಗಗಳನ್ನು ಹುಡುಕುತ್ತಿದ್ದಾಗ, ಮಕ್ಕಳ ಮಾನವ ಅಂಗಗಳನ್ನು ತೆಗೆದು ಮಾರಾಟ ಮಾಡುವ ಆಲೋಚನೆ ಆತನಿಗೆ ಹೊಳೆಯಿತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಇಂತಹ ಅಪರಾಧ ಮನಸ್ಥಿತಿಯು ಅತ್ಯಂತ ಗಂಭೀರವಾದದ್ದು" ಎಂದು ಎಸ್‌ಎಸ್‌ಪಿ ಲಾಲ್ ಉಮೇದ್ ಸಿಂಗ್ ತಿಳಿಸಿದ್ದಾರೆ.

ವಿದ್ಯುತ್ ಅವಘಡದಲ್ಲಿ ಯುವಕ ಸಾವು; ಕುಟುಂಬಕ್ಕೆ 5 ಲಕ್ಷ ಪರಿಹಾರದ ಚೆಕ್ ವಿತರಿಸಿದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ

ಬೀದರ್:ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬರೂರ ಗ್ರಾಮದ ರೋಷನ್ ಎಂಬ ಯುವಕ ವಿದ್ಯುತ್ ಅವಘಡದಲ್ಲಿ ಮೃತಪಟ್ಟ ದುರ್ಘಟನೆಗೆ ಸಂಬಂಧಿಸಿದಂತೆ, ಮೃತ ಯುವಕನ ಕುಟುಂಬಕ್ಕೆ ಜೆಸ್ಕಾಂ ಇಲಾಖೆಯ ವತಿಯಿಂದ ?5 ಲಕ್ಷ ಪರಿಹಾರ ಮಂಜೂರಾಗಿದೆ. ಈ ಹಿನ್ನೆಲೆಯಲ್ಲಿ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಮೃತ ಯುವಕನ ತಾಯಿಗೆ ?5 ಲಕ್ಷ ಮೊತ್ತದ ಪರಿಹಾರದ ಚೆಕ್ ವಿತರಿಸಿದರು.



ಬೀದರ್ ನಗರದ ಪ್ರತಾಪ ನಗರ 'ದಲ್ಲಿರುವ ಶಾಸಕರ ಕಚೇರಿಯಲ್ಲಿ ಪರಿಹಾರದ ಚೆಕ್ ವಿತರಿಸಿ, ಮೃತ ಯುವಕನ ಕುಟುಂಬದ ಸದಸ್ಯರಿಗೆ ಸಾಂತ್ವನ ತಿಳಿಸಿದರು. ಮಗನನ್ನು ಕಳೆದುಕೊಂಡ ತಾಯಿಯ ನೋವಿನಲ್ಲಿ ಭಾಗಿಯಾದ ಶಾಸಕರು, ಕುಟುಂಬದ ಸಂಕಷ್ಟದ ಸಂದರ್ಭದಲ್ಲಿ ಧೈರ್ಯ ತುಂಬಿ, ಸಾಂತ್ವನ ಹೇಳಿದರು.

ವಿದ್ಯುತ್ ಅವಘಡದಿಂದ ಯುವಕನ ಅಕಾಲಿಕ ಸಾವು ಕುಟುಂಬಕ್ಕೆ ತುಂಬಲಾರದ ನಷ್ಟವಾಗಿದೆ. ಇಂತಹ ಕಷ್ಟದ ಸಮಯದಲ್ಲಿ ಸಂತ್ರಸ್ತ ಕುಟುಂಬಕ್ಕೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳ ಮೂಲಕ ದೊರೆಯಬೇಕಾದ ಪರಿಹಾರ ಮತ್ತು ನೆರವು ತಲುಪಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಜೆಸ್ಕಾಂ ಇಲಾಖೆಯ ವತಿಯಿಂದ ಮಂಜೂರಾದ ಪರಿಹಾರದ ಮೊತ್ತವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಯಿತು.

ಮೃತ ಯುವಕ ರೋಷನ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಶಾಸಕರು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಜೆಸ್ಕಾಂ ಎಇಇ ಶಶಿರೇಖಾ ಪಾಟೀಲ, ಅಧಿಕಾರಿ ಎಂ.ಡಿ. ಶಯಿದ್, ಮುಖಂಡರಾದ ಅನೀಲಕುಮಾರ ಪನ್ನಾಳೆ, ಶಿವಕುಮಾರ ಸ್ವಾಮಿ, ಬಾಬುರಾವ ಕಾರಬಾರಿ, ದಯಾನಂದ ರೆಡ್ಡಿ, ರಾಜಕುಮಾರ ಪಾಟೀಲ್, ಶಿವಶರಣಪ್ಪ ತಗಾರೆ, ದೇವೇಂದ್ರ ಚಾಂಗಲೇರಾ, ಇಂದ್ರಾರೆಡ್ಡಿ, ಉಲ್ಲಾಸ ರೆಡ್ಡಿ, ಸಂತೋಷ, ಶ್ರೀನಿವಾಸ, ಮಲ್ಲಿಕಾರ್ಜುನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅಜ್ಞಾನದಿಂದ ಸುಜ್ಞಾನದೆಡೆಗೆ ಸಾಗಿಸುವ ಸಂದೇಶದ ದೀಪಾವಳಿ



ಕಲಬುರಗಿ:

ದೀಪಾವಳಿಯು ಕೇವಲ ಬಾಹ್ಯ ಕತ್ತಲೆಯನ್ನು ಹೋಗಲಾಡಿಸುವ ಸಂದೇಶ ಹೊಂದಿಲ್ಲ. ಬದಲಿಗೆ ಬೆಳಕನ್ನು ಹೊತ್ತಿಸುವ ಸಂಕೇತವಾದ, ಅಜ್ಞಾನ, ಅಂಧಕಾರ, ಮೌಢ್ಯತೆ ತೊಲಗಿ ವೈಚಾರಿಕತೆ, ಸುಜ್ಞಾನ ಎಲ್ಲರಲ್ಲಿ ಮೂಡಲಿ ಎಂಬ ಶ್ರೇಷ್ಠ ಮೌಲ್ಯವನ್ನು ಸಾರುವ ಹಬ್ಬವಾಗಿದೆ. ಪರಸ್ಪರ ಶಾಂತಿ, ಪ್ರೀತಿ, ಸೌಹಾರ್ದತವಾಗಿ ಆಚರಿಸುವ ಮೂಲಕ ಹಬ್ಬದ ಮೌಲ್ಯವನ್ನು ಅನುಸರಿಸಬೇಕಾಗಿದೆ ಎಂದು ಚಿಂತಕ, ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು. ನಗರದ ಆಳಂದ ರಸ್ತೆಯ ಶಿವ ನಗರದಲ್ಲಿರುವ 'ಜ್ಞಾನ ಚಿಗುರು ಟ್ಯೂಟೋರಿಯಲ್ಸ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ ದೀಪಾವಳಿ-ದೀಪೋತ್ಸವ ಕಾರ್ಯಕ್ರಮದಲ್ಲಿ ಸಾಮೂಹಿಕವಾಗಿ ದೀಪಗಳನ್ನು ಬೆಳಗಿಸಿ,ನಂತರಅವರುಮಾತನಾಡುತ್ತಿದ್ದರು.

ಈಗಾಗಲೇ ಅನೇಕ ಮಾಲಿನ್ಯಗಳಿಂದ ಪರಸರ ತತ್ತರಿಸಿ ಹೋಗಿದೆ. ದೀಪಾವಳಿಯಲ್ಲಿ ವಿಪರಿತ ಪಟಾಕಿ ಸಿಡಿಸಿ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯಗಳ ಮೂಲಕ ಮತ್ತಷ್ಟು ಮಾಲಿನ್ಯ ಸೇರ್ಪಡೆ ಬೇಡ. ದೀಪಗಳನ್ನು ಬೆಳಗಿಸಿದರೆ ಪರಿಸರ ಶುದ್ಧವಾಗುವುದರಿಂದ ಪಟಾಕಿ ಬಿಟ್ಟು, ದೀಪಗಳನ್ನು ಬೆಳಗಿಸುವ ಮೂಲಕ ಪರಿಸರ ಸ್ನೇಹಿ ದೀಪಾವಳಿ ಆಚರಿಸುವುದು ಪ್ರಸ್ತುತ ಸಂದರ್ಭದಲ್ಲಿ ತುಂಬಾ ಅಗತ್ಯವಾಗಿದೆ. ಮಕ್ಕಳಿಗೆ ಪಟಾಕಿ ಸಿಡಿದು ಕಣ್ಣಿಗೆ ಗಾಯವಾಗುತ್ತಿರುವ ಘಟನೆಗಳು ಸಂಭವಿಸುತ್ತಿವೆ. ಇದಕ್ಕೆ ಆಸ್ಪದ ಬೇಡ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಶಿವಯೋಗಪ್ಪ ಬಿರಾದಾರ, ದೇವೇಂದ್ರಪ್ಪ ಗಣಮುಖಿ, ವಿಠಲ, ಸಿದ್ದರಾಮ, ರಾಹುಲ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಭೌತಿಕ ಸಂಪತ್ತಿನಷ್ಟೇ ಆಧ್ಯಾತ್ಮಿಕ ಸಂಪತ್ತಿನ ಅಗತ್ಯವಿದೆ – ಶ್ರೀ ರಂಭಾಪುರಿ ಜಗದ್ಗುರುಗಳು

ಅರಸೀಕೆರೆ–



ಭಾರತೀಯ ಸನಾತನ ಧರ್ಮ ಪರಂಪರೆಯಲ್ಲಿ ಶ್ರೀ ಗಣಪತಿಯ ಆರಾಧನೆಗೆ ಅತ್ಯಂತ ಪವಿತ್ರವಾದ ಸ್ಥಾನವಿದೆ. ಯಾವುದೇ ಶುಭ ಕಾರ್ಯದ ಆರಂಭದಲ್ಲಿ ಪ್ರಥಮ ಪೂಜೆಯನ್ನು ಸ್ವೀಕರಿಸುವ ಗಣನಾಯಕ ಬುದ್ಧಿ ವಿವೇಕ ಜ್ಞಾನ ಶಕ್ತಿ ಹಾಗೂ ಸಿದ್ಧಿಯ ಸಂಕೇತವಾಗಿದ್ದಾನೆ. ಭಕ್ತರ ಸಂಕಷ್ಟಗಳನ್ನು ಪರಿಹರಿಸಿ ಸನ್ಮಾರ್ಗದಲ್ಲಿ ಮುನ್ನಡೆಯಲು ಅನುಗ್ರಹಿಸುವ ಕರುಣಾಮಯ ದೇವತೆ ಪ್ರಸನ್ನ ಗಣಪತಿ ಆಗಿರುವನೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.ಅವರು ಶುಕ್ರವಾರ ನಗರದ ಶ್ರೀ ಪ್ರಸನ್ನ ಗಣಪತಿ ಭಕ್ತ ಮಂಡಳಿಯವರು ಆಯೋಜಿಸಿರುವ ಶ್ರೀ ಪ್ರಸನ್ನ ಗಣಪತಿ 85ನೇ ವಾರ್ಷಿಕೋತ್ಸವ ಅಂಗವಾಗಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಆಶೀರ್ವಚನ ನೀಡುತ್ತಿದ್ದರು. ಸುದೀರ್ಘ ಅವಧಿಯಲ್ಲಿ ಶ್ರೀ ಪ್ರಸನ್ನ ಗಣಪತಿಯನ್ನು ಆರಾಧಿಸಲ್ಪಡುವ ಪ್ರಸನ್ನ ಗಣಪತಿ ಭಕ್ತ ಮಂಡಳಿಯವರ ಧಾರ್ಮಿಕ ಶ್ರದ್ಧೆ ವಿಶೇಷವಾದದ್ದು. ಪ್ರಸನ್ನ ಗಣಪತಿಯ ಧಾರ್ಮಿಕ ಸಮಾರಂಭವು ಒಂದು ಉತ್ಸವವಲ್ಲ. ಅದು ಭಕ್ತಿ ಶ್ರದ್ಧೆ ಧಾರ್ಮಿಕ ಜಾಗೃತಿ ಹಾಗೂ ಸಾಮಾಜಿಕ ಸಾಮರಸ್ಯದ ಮಹಾಪರ್ವವಾಗಿದೆ. ಇಂಥ ಧಾರ್ಮಿಕ ಆಚರಣೆಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಜೀವಂತಿಕೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಸಮಾರಂಭವಾಗಿದೆ. ಗಣಪತಿಯ ವಿಶಾಲವಾದ ಕಿವಿಗಳು ಎಲ್ಲರ ಮಾತುಗಳನ್ನು ಆಲಿಸುವ ಸಹನೆಯನ್ನು ದೊಡ್ಡ ತಲೆಯೂ ವಿಶಾಲ ಚಿಂತನೆಯನ್ನು ಸಣ್ಣ ಕಣ್ಣುಗಳು ಏಕಾಗ್ರತೆಯನ್ನು ಸೊಂಡಿಲು ಕಾರ್ಯದಕ್ಷತೆಯನ್ನು ಸಾರುತ್ತವೆ. ಹೀಗಾಗಿ ಗಣಪತಿಯ ಆರಾಧನೆ ಎಂದರೆ ಕೇವಲ ಬಾಹ್ಯ ಪೂಜೆಯಲ್ಲ. ಆತನ ತತ್ವ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ನಿಜವಾದ ಆರಾಧನೆಯಾಗಿದೆ. ಇಂದಿನ ಸಮಾಜದಲ್ಲಿ ಮನುಷ್ಯನಿಗೆ ಭೌತಿಕ ಸಂಪತ್ತಿನಷ್ಟೇ ಆಧ್ಯಾತ್ಮಿಕ ಸಂಪತ್ತಿನ ಅವಶ್ಯಕತೆ ಇದೆ. ಧರ್ಮವು ಮನುಷ್ಯನನ್ನು ಮನುಷ್ಯನನ್ನಾಗಿ ರೂಪಿಸಬೇಕು. ಭಕ್ತಿ ವಿನಯ ಆಚರಣೆಗಳು ಬೆಳೆದು ಪರಸ್ಪರ ವಿಶ್ವಾಸ ಸಹಬಾಳ್ವೆಯ ಮನೋಭಾವನೆಯನ್ನು ಗಟ್ಟಿಗೊಳಿಸಬೇಕು. ಈ ಉತ್ಸವ ಇಂತಹ ಉದಾತ್ತ ಮೌಲ್ಯಗಳನ್ನು ಬೆಳೆಸುತ್ತಾ ಬಂದಿದೆ. ನಾಡಿನ ಜನತೆಗೆ ಸುಖ ಶಾಂತಿ ಸಮೃದ್ಧಿ ಆರೋಗ್ಯ ಹಾಗೂ ಸೌಹಾರ್ದತೆಯನ್ನು ಪ್ರಸನ್ನ ಗಣಪತಿ ಅನುಗ್ರಹಿಸಲೆಂದು ಶುಭ ಹಾರೈಸಿದರು. ನೇತೃತ್ವ ವಹಿಸಿದ ದೊಡ್ಡಗುಣಿ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಇಂದಿನ ವೈಚಾರಿಕ ಯುಗದಲ್ಲಿ ಧಾರ್ಮಿಕ ಶ್ರದ್ಧೆ ಜನರಲ್ಲಿ ಕಡಿಮೆಯಾಗುತ್ತಿರುವುದು ನೋವಿನ ಸಂಗತಿ. ಅರಸೀಕೆರೆಯ ಪ್ರಸನ್ನ ಗಣಪತಿ ಭಕ್ತ ಮಂಡಳಿಯವರು ಪ್ರತಿ ವರ್ಷ ಸುಧೀರ್ಘ ಅವಧಿಯವರೆಗೆ ಸಮಾರಂಭಗಳನ್ನು ಹಮ್ಮಿಕೊಳ್ಳುತ್ತಿರುವುದು ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಾಲಗಂಗಾಧರ ತಿಲಕ್ ಅವರು ಸಾಮೂಹಿಕ ಗಣೇಶೋತ್ಸವಗಳನ್ನು ಪ್ರಾರಂಭಿಸಿ ಹಿಂದೂ ಸಂಘಟನೆಗಳನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದನ್ನು ಎಂದಿಗೂ ಮರೆಯಲಾಗದು. ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಸಂಪತ್ತು ಹೊಂದಿದ್ದರೂ ಧಾರ್ಮಿಕ ಶ್ರದ್ಧೆ ಭಕ್ತಿ ಇಲ್ಲದೆ ಹೋದರೆ ಜೀವನದಲ್ಲಿ ಶಾಂತಿ ಸಮಾಧಾನ ದೊರಕದು ಎಂದರು. ಮಾಜಿ ಶಾಸಕ ಕೆ.ಪಿ.ಪ್ರಭುಕುಮಾರ್, ಮಾಜಿ ಶಾಸಕ ಜಿ.ಎಸ್.ಪರಮೇಶ್ವರ್ ಹಾಗೂ ಕೆ.ಪಿ.ಚಂದ್ರಶೇಖರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಶ್ರೀ ಪ್ರಸನ್ನ ಗಣಪತಿ ಭಕ್ತ ಮಂಡಳಿಯ ಕಾರ್ಯದರ್ಶಿಗಳಾದ ನಾಗಭೂಷಣ್ ಅವರು ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಿಜೆಪಿಗೂ ಮೆಟ್ರೊ ಉದ್ಘಾಟನೆಗೂ ಏನು ಸಂಬಂಧ. : ಸಿಎಂ ಡಿಕೆಶಿ

ಕನಕಪುರ,

ಬೆಂಗಳೂರಿನ ಮೆಟ್ರೊ ಗುಲಾಬಿ ಮಾರ್ಗದ ಉದ್ಘಾಟನೆಗೆ ನ.13ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ನಮ್ಮ ಸರ್ಕಾರವೇ ಆಹ್ವಾನಿಸಿದೆ. ಆದರೆ ಕೆಲವರು ತಾವೇ ಆಹ್ವಾನಿಸಿರುವುದಾಗಿ ಪ್ರಚಾರ ಪಡೆಯುತ್ತಿದ್ದಾರೆ. ಬಿಜೆಪಿಗೂ ಮೆಟ್ರೊ ಉದ್ಘಾಟನೆಗೂ ಏನು ಸಂಬಂಧ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ನಕ್ಷೆಗಳನ್ನು ನೋಡಿ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೆಟ್ರೊ ಅಭಿವೃದ್ಧಿಗೆ ಸಾರ್ವಜನಿಕರ ಹಣದ ಜೊತೆಗೆ ಸಾಲವನ್ನೂ ಬಳಸಲಾಗಿದೆ. ಈ ಸಂಬಂಧ ಕೆಲವು ಪ್ರಮುಖ ವಿಚಾರಗಳನ್ನು ನ.13ರಂದು ಪ್ರಧಾನಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದರು.

ರಾಹುಲ್ ಗಾಂಧಿ ಸಭೆಯಲ್ಲಿ ಭಾಗಿ: ದೆಹಲಿಯಲ್ಲಿ ರಾಹುಲ್ ಗಾಂಧಿಯವರು ಕೆಪಿಸಿಸಿ ಅಧ್ಯಕ್ಷರು ಹಾಗೂ ಶಾಸಕಾಂಗ ಪಕ್ಷದ ನಾಯಕರ ಸಭೆ ಕರೆದಿದ್ದು, ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವುದಾಗಿ ತಿಳಿಸಿದರು. ಸಭೆ ಸುಮಾರು ಒಂದೂವರೆ ಗಂಟೆ ನಡೆಯಲಿದೆ. ದೀಪಾವಳಿ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಬೇರೆ ಯಾರನ್ನೂ ಭೇಟಿ ಮಾಡುವುದಿಲ್ಲ ಎಂದರು.

ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ:

ಸುರಪುರದ ದೇವಿಕೆಮ್ಮಗೆ 'ವಾತ್ಸಲ್ಯದ ಮನೆ' ಹಸ್ತಾಂತರ

ಸುರಪುರ:

'ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ನಿರ್ಗತಿಕರನ್ನು ಗುರುತಿಸಿ ಅವರಿಗೆ ವಾತ್ಸಲ್ಯ ಮನೆ ಯೋಜನೆಯಲ್ಲಿ ಉಚಿತವಾಗಿ ಮನೆ ಕಟ್ಟಿಕೊಡುತ್ತಿದೆ. ವಸತಿ ರಹಿತರು ತಮ್ಮ ಮನೆಯಲ್ಲಿ ನೆಮ್ಮದಿಯಿಂದ ಜೀವನ ಮಾಡಲು ಇದರಿಂದ ಸಾಧ್ಯವಾಗುತ್ತದೆ' ಎಂದು ಸಂಸ್ಥೆಯ ಜಿಲ್ಲಾ ನಿರ್ದೇಶಕ ವಸಂತಗೌಡ ಹೇಳಿದರು.



ತಾಲ್ಲೂಕಿನ ದೇವಿಕೇರಾ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ದೇವಿಕೆಮ್ಮ ಅವರಿಗೆ 'ವಾತ್ಸಲ್ಯ ಮನೆ' ಹಸ್ತಾಂತರಿಸಿ ಅವರು ಮಾತನಾಡಿದರು. ಪೊಲೀಸ್ ಇನ್ಸ್‌ಪೆಕ್ಟರ್ ಉಮೇಶನಾಯಕ ಮಾತನಾಡಿ, 'ಸರ್ಕಾರ ಮಾಡುವ ಕೆಲಸವನ್ನು ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ. ಮನೆಯಿಲ್ಲದವರು ಈ ಯೋಜನೆಯಲ್ಲಿ ತಮ್ಮ ಸ್ವಂತ ಮನೆ ಹೊಂದಿದ ತೃಪ್ತ ಭಾವ ಹೊಂದಲಿದ್ದಾರೆ' ಎಂದರು.

ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಪ್ರಕಾಶ ಅಂಗಡಿ ಕನ್ನೆಳ್ಳಿ, ಕೋಶಾಧಿಕಾರಿ ಸುಗೂರೇಶ ವಾರದ, ಗ್ರಾಮದ ಗಣ್ಯರಾದ ಶಾಂತಮೂರ್ತಿ ಹಿರೇಮಠ, ಸಂಸ್ಥೆಯ ತಾಲ್ಲೂಕು ಯೋಜನಾಧಿಕಾರಿ ನಾಗೇಶ ಎನ್.ಪಿ., ವಿನೋದ್, ಅನಿತಾ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ರಾಜ್ಯದ ಅಂತರ್ಜಲದಲ್ಲಿ ಹೆಚ್ಚಿದ ರಾಸಾಯನಿಕ: ಅರ್ಧದಷ್ಟು ಮಾದರಿಗಳು ಸುರಕ್ಷತಾ ಮಾನದಂಡ ಪೂರೈಸುವಲ್ಲಿ ವಿಫಲ!

ಬಾವಿಗಳನ್ನು ಹೆಚ್ಚು ಆಳಕ್ಕಿಳಿದು ಕೊರೆಯುವಂತೆ ಮಾಡಿದೆ. ಈ ಆಳವಾದ ಕೊರೆಯುವಿಕೆಯು ತೀವ್ರವಾದ ಭೂವೈಜ್ಞಾನಿಕ ಸೋರಿಕೆಯನ್ನು ಪ್ರಚೋದಿಸಿದೆ. ನೈಸರ್ಗಿಕವಾಗಿ ಸಂಭವಿಸುವ ಅಪಾಯಕಾರಿ ಖನಿಜಗಳು ನೀರಿನಾಂಶಕ್ಕೆ ಸೇರಿ ತನ್ನ ಅಂಶಗಳನ್ನು ಬಿಡುಗಡೆ ಮಾಡುತ್ತಿವೆ. ಜೊತೆಗೆ ಕೃಷಿ ಹರಿವು ಮತ್ತು ಕೈಗಾರಿಕಾ ತ್ಯಾಜ್ಯಗಳು ಆಳವಿಲ್ಲದ ಜಲಚರಗಳನ್ನು ಮತ್ತಷ್ಟು ಕಲುಷಿತಗೊಳಿಸುತ್ತಿವೆ.

ಈ ದತ್ತಾಂಶದ ಅನುಸಾರ ಈ ನೀರಿನ ಮೂಲಗಳು ಮಾನವ ಬಳಕೆಗೆ ಸುರಕ್ಷಿತ ಎಂದು ಪರಿಗಣಿಸಲಾದ ಮಿತಿಗಳನ್ನು ಮೀರಿ, ಹಲವಾರು ಪ್ರಮುಖ ರಾಸಾಯನಿಕ ಸಂಯುಕ್ತಗಳು ಮತ್ತು ಲೋಹಗಳಿಂದ ವ್ಯಾಪಕವಾದ ಮಾಲಿನ್ಯ ಉಂಟು ಮಾಡುತ್ತಿರುವುದನ್ನು ಬಹಿರಂಗಗೊಳಿಸಿದೆ.

ಅಕ್ಕ ಕೆಫೆಗಳ ಅನುಷ್ಠಾನದಲ್ಲಿ ರಾಜ್ಯದಲ್ಲೇ ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ ಜಿಲ್ಲಾ ಪಂಚಾಯತ್ ಸಿಇಒಗೆ ಅಭಿಯಾನ ನಿರ್ದೇಶಕರಿಂದ ಪ್ರಶಂಸನಾ ಪತ್ರ

ರಾಯಚೂರು ಜಿಲ್ಲೆಯ ಈ ಸಾಧನೆಯು ಗ್ರಾಮೀಣ ಮಹಿಳೆಯರ ಉದ್ಯಮಶೀಲತೆ ಮತ್ತು ಆರ್ಥಿಕ ಸಬಲೀಕರಣಕ್ಕೆ ದೊರೆತ ಮಹತ್ವದ ಉತ್ತೇಜನವಾಗಿದ್ದು, ಜಿಲ್ಲೆಯ ಅಭಿವೃದ್ಧಿಯ ಪ್ರಯತ್ನಗಳಿಗೆ ಮತ್ತೊಂದು ಹೆಮ್ಮೆಯ ಗರಿಯಾಗಿದೆ.

ಕನಸಿನ ಕ್ಷೇತ್ರ ನಿರ್ಮಾಣದತ್ತ ಶಾಸಕರ ದಿಟ್ಟ ನಡಿಗೆ: ಕ್ಷೇತ್ರದ ಅಭಿವೃದ್ಧಿಗೆ ನವ ಚೈತನ್ಯ -ಶಾಸಕ ಬಸನಗೌಡ ದದ್ದಲ್

ಭೂಮಿ ಪೂಜೆ ನೆರವೇರಿಸಿ ಅಂದಾಜು ರೂ 37.50 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಎರಡು ಶಾಲಾ ಕೊಠಡಿಗಳನ್ನು ಉದ್ಘಾಟಿಸಲಾಯಿತು

ಕೊತ್ತದೊಡ್ಡಿ: ಮಾರೆಮ್ಮ ದೇವಿ ದೇವಸ್ಥಾನದ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಚಂದ್ರಬಂಡಾ: ಬಂಡೆ ರಂಗನಾಥ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆಯಲಾಯಿತು.

ವಡ್ಲಂದೊಡ್ಡಿ: ಅಂದಾಜು ₹45 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಮೂರು ಶಾಲಾ ಕೊಠಡಿಗಳನ್ನು ಉದ್ಘಾಟಿಸಲಾಯಿತು.

ಮಂಡಲಗೇರ: ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ, ಶಾಲೆಯ ತರಗತಿ ಕೊಠಡಿಗಳ ಸ್ಥಿತಿಗತಿ ಹಾಗೂ ಮೂಲಸೌಕರ್ಯಗಳನ್ನು ಪರಿಶೀಲಿಸಲಾಯಿತು.

ಸಿಂಗನೋಡಿ: ಎರಡು ಶಾಲಾ ಕೊಠಡಿಗಳನ್ನು ಉದ್ಘಾಟಿಸಿ, ಹೆಚ್ಚುವರಿ ಎರಡು ಕೊಠಡಿಗಳ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು. ಈ ಕಾಮಗಾರಿಗಳಿಗೆ ಒಟ್ಟು ಅಂದಾಜು ₹60 ಲಕ್ಷ ವೆಚ್ಚವಾಗಲಿದೆ. ಅಂದಾಜು ₹25 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಧನಮ್ಮ ಗುಡಿ ಹಾಗೂ ಕರೇಮ್ಮ ಗುಡಿಗಳನ್ನು ಉದ್ಘಾಟಿಸಲಾಯಿತು.

ಬಾಪುರ: ಬಾಪುರದಿಂದ ಬಾಪುರ ತಾಂಡಾಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಅಂದಾಜು ₹120 ಲಕ್ಷ ಹಾಗೂ ಬಾಪುರದಿಂದ ಆಂಧ್ರಪ್ರದೇಶ ಗಡಿವರೆಗಿನ ರಸ್ತೆ ಕಾಮಗಾರಿಗೆ ಅಂದಾಜು ₹65 ಲಕ್ಷ ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ಸರ್ಕಾರಿ ಪ್ರೌಢಶಾಲೆಯಲ್ಲಿ ಅಂದಾಜು ₹46.50 ಲಕ್ಷ ವೆಚ್ಚದಲ್ಲಿ ಎರಡು ಶಾಲಾ ಕೊಠಡಿಗಳನ್ನು ಉದ್ಘಾಟಿಸಿ, ಹೆಚ್ಚುವರಿ ಒಂದು ಕೊಠಡಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು. ಅಂದಾಜು ₹20 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಗ್ರಂಥಾಲಯವನ್ನು ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಕರೇಮ್ಮ ಗುಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಕಟ್ಲಟ್ಕೂರು: ಅಂದಾಜು ₹36.13 ಲಕ್ಷ ವೆಚ್ಚದಲ್ಲಿ ಎರಡು ಶಾಲಾ ಕೊಠಡಿಗಳ ನಿರ್ಮಾಣ ಹಾಗೂ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಗ್ರಾಮೀಣ ಭಾಗದ ರಸ್ತೆ ಸಂಪರ್ಕ, ಶಿಕ್ಷಣ, ಧಾರ್ಮಿಕ ಕೇಂದ್ರಗಳು ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡುವ ಮೂಲಕ ಜನರ ಅಗತ್ಯಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಶಿಕ್ಷಣ ತಜ್ಞರ ಆಕ್ಷೇಪಣೆಗಳನ್ನು ಕಡೆಗಣಿಸಿ ಯೋಜನೆ ಜಾರಿಗೊಳಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ!

ವಿಧಿಗಳ ಸಾಮಾಜಿಕ ನ್ಯಾಯ ಹಾಗೂ ದುರ್ಬಲ ವರ್ಗಗಳ ಹಿತಾಸಕ್ತಿಗಳ ರಕ್ಷಣೆಯ ಆಶಯಗಳನ್ನು ಸರ್ಕಾರ ಎತ್ತಿಹಿಡಿಯಬೇಕಿದೆ. ಶಿಕ್ಷಣವು ಮಾರುಕಟ್ಟೆಯ ಸರಕಲ್ಲ; ಅದು ಪ್ರತಿಯೊಬ್ಬ ಮಗುವಿನ ಸಾಂವಿಧಾನಿಕ ಹಕ್ಕು ಮತ್ತು ಸರ್ಕಾರದ ಸಾರ್ವಜನಿಕ ಜವಾಬ್ದಾರಿಯಾಗಿದೆ.

ಆದ್ದರಿಂದ ಅಖಿಲ ಭಾರತ ಕ್ರಾಂತಿಕಾರಿ ವಿದ್ಯಾರ್ಥಿ ಸಂಘಟನೆ () ಹಾಗೂ ಭಾರತ ಕ್ರಾಂತಿಕಾರಿ ಯುವಜನ ಒಕ್ಕೂಟ () ಕರ್ನಾಟಕ ರಾಜ್ಯ ಸಮಿತಿಗಳು ರಾಜ್ಯ ಸರ್ಕಾರವನ್ನು ಕೆಳಗಿನಂತೆ ಆಗ್ರಹಿಸುತ್ತವೆ:

1. ಜನವಿರೋಧಿ ಮ್ಯಾಗ್ನೆಟ್ ಶಾಲಾ ಯೋಜನೆಯನ್ನು ತಕ್ಷಣ ಸ್ಥಗಿತಗೊಳಿಸಿ, ಸಾರ್ವಜನಿಕ ಚರ್ಚೆ ಮತ್ತು ಸ್ವತಂತ್ರ ಶಿಕ್ಷಣ ತಜ್ಞರ ಸಮಿತಿಯ ಪರಿಶೀಲನೆಗೆ ಒಳಪಡಿಸಬೇಕು.
2. ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚುವುದು ಅಥವಾ ವಿಲೀನಗೊಳಿಸುವುದನ್ನು ನಿಲ್ಲಿಸಬೇಕು. ಸರ್ಕಾರಿ ಶಾಲೆಗಳ ಕಟ್ಟಡ, ಭೂಮಿ ಮತ್ತು ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸುವುದಿಲ್ಲವೆಂದು ಕಾನೂನುಬದ್ಧ ಭರವಸೆ ನೀಡಬೇಕು.
3. ಸಾಲದ ಒಪ್ಪಂದ, ಷರತ್ತುಗಳು, ಯೋಜನಾ ದಾಖಲೆಗಳು ಮತ್ತು ಖಾಸಗಿ ಸಂಸ್ಥೆಗಳ ಭಾಗವಹಿಸುವಿಕೆಯ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು.
4. ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಖಾಲಿ ಶಿಕ್ಷಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಿ, ಅಗತ್ಯ ತರಗತಿ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಬೇಕು.
5. ಗ್ರಾಮೀಣ, ದಲಿತ, ಆದಿವಾಸಿ ಹಾಗೂ ಹಿಂದುಳಿದ ಪ್ರದೇಶಗಳ ಮಕ್ಕಳಿಗೆ ಸಮೀಪದಲ್ಲಿಯೇ ಗುಣಮಟ್ಟದ ಉಚಿತ ಶಿಕ್ಷಣ ದೊರೆಯುವಂತೆ ಖಾತರಿಪಡಿಸಬೇಕು.

ಸರ್ಕಾರವು ಕಾರ್ಪೊರೇಟ್ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಹಿತಾಸಕ್ತಿಗಿಂತ ಕೋಟ್ಯಂತರ ಬಡ ಮಕ್ಕಳ ಭವಿಷ್ಯಕ್ಕೆ ಆದ್ಯತೆ ನೀಡಬೇಕು. ಶಿಕ್ಷಣದ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳಲು ಬಿಡುವುದಿಲ್ಲ. ಸರ್ಕಾರಿ ಶಾಲೆಗಳನ್ನು ಉಳಿಸಲು ವಿದ್ಯಾರ್ಥಿ, ಯುವಜನ, ಶಿಕ್ಷಕ, ಪೋಷಕ ಹಾಗೂ ಪ್ರಜಾಪ್ರಭುತ್ವವಾದಿ ಸಂಘಟನೆಗಳೊಂದಿಗೆ ರಾಜ್ಯವ್ಯಾಪಿ ಹೋರಾಟವನ್ನು ಬಲಪಡಿಸಲಾಗುವುದು.

ಸಾರ್ವಜನಿಕ ಶಿಕ್ಷಣ ನಮ್ಮ ಹಕ್ಕು ಖಾಸಗೀಕರಣಕ್ಕೆ ಅವಕಾಶವಿಲ್ಲ!
ಸರ್ಕಾರಿ ಶಾಲೆಗಳನ್ನು ಉಳಿಸಿ ಶಿಕ್ಷಣದ ಹಕ್ಕನ್ನು ರಕ್ಷಿಸಿ!
ಶಿಕ್ಷಣ ವ್ಯಾಪಾರವಲ್ಲ, ಅದು ಸಂವಿಧಾನಬದ್ಧ ಹಕ್ಕು!
ಅಖಿಲ ಭಾರತ ಕ್ರಾಂತಿಕಾರಿ ವಿದ್ಯಾರ್ಥಿ ಸಂಘಟನೆ ()
ಮತ್ತು ಭಾರತ ಕ್ರಾಂತಿಕಾರಿ ಯುವಜನ ಒಕ್ಕೂಟ ()
ಕರ್ನಾಟಕ ರಾಜ್ಯ ಸಮಿತಿ
ಸಂದೀಪ್ ಬಿ.ಆರ್.ರಾಜ್ಯ ಮುಖಂಡರು,
ಎಂ. ನಿರಂಜನಕುಮಾರ್ ರಾಜ್ಯ ಮುಖಂಡರು,

ವನ್ಯಜೀವಿಗಳನ್ನು ಕೊಲ್ಲಬೇಡಿ ರಕ್ಷಿಸಿ : ಪಿಕಳಿಹಾಳ ಅಯ್ಯಪ್ಪ ಆಭರಣ ಎಂಬ ಹಾವನ್ನು ಅರಣ್ಯಕ್ಕೆ ಕಳಿಸಿ ರಕ್ಷಣೆ

ಹಿಡಿಯಲು ಪ್ರಯತ್ನಿಸದೆ ಉರಗ ತಜ್ಞರಾದ ಅಫ್ಸರ್ ಹುಸೇರವರಿಗೆ ಒಂದು ಫೋನ್ ಕಾಲ್ ಮಾಡಿದರೆ ತಕ್ಷಣ ಬಂದು ಹಾವನ್ನು ತೆಗೆದುಕೊಂಡು ಹೋಗಿ ಮತ್ತೆ ಅರಣ್ಯಕ್ಕೆ ಬಿಡುತ್ತಾರೆ, ಯಾಕೆಂದರೆ ಯಾವುದೇ ಜಂತು ಉಳುವಿರಲಿ ಅದರ ಪಾಡಿಗೆ ಅದನ್ನು ಬಿಡಿ, ಮೂಕ ಪಗರಾಣಿಗಳು ಯಾರಿಗೂ ಎಂದೂ ಕೂಡ ತೊಂದರೆ ಕೊಡುವುದಿಲ್ಲ ಹಾಗೇ ಪ್ರಾಣಿಗಳನ್ನು ಕೊಲ್ಲು ಮತ್ತು ನಾಶ ಮಾಡುವ ಅಧಿಕಾರ ಮನುಷ್ಯರಿಗೆ ಇಲ್ಲವಾಗಿದೆ, ದೇಶದ ಹಾಗೂ ನಾಡಿನ ಜನತೆಗೆ ವಿನಂತಿಸಿಕೊಳ್ಳುವುದೇನೆಂದರೆ ವನ್ಯ ಜೀವಿಗಳನ್ನು ರಕ್ಷಿಸಿ ಅವು ನಮ್ಮನ್ನು ರಕ್ಷಿಸುತ್ತವೆ.

ಬಳ್ಳಾರಿ: ಬಾಲಕಿಯರನ್ನು ವೇಶ್ಯಾವಾಟಿಕೆಗೆ ತಳ್ಳುತ್ತಿದ್ದ ಬೃಹತ್ ಜಾಲ ಬಯಲಿಗೆ

ಸಾರ್ವಜನಿಕರು ನೀಡುವ ಮಾಹಿತಿಯನ್ನು ಗೌಪ್ಯವಾಗಿ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಗಾಂಧೀಯ ರಾಮ-ಮನುವಾದಿಗಳ ಶ್ರೀರಾಮನಲ್ಲ



ಸಮಾನತೆಯ ರಾಮರಾಜ್ಯಕ್ಕೂ, ವರ್ಣಾಶ್ರಮದ ರಾಜಕಾರಣಕ್ಕೂ ಇರುವ ವ್ಯತ್ಯಾಸವೇನು? ಗಾಂಧೀಜಿಯವರ ಪಾಲಿಗೆ ರಾಮ ಎಂದರೆ ಸತ್ಯ, ಅಹಿಂಸೆ, ಪ್ರೀತಿ ಮತ್ತು ಸರ್ವಧರ್ಮ ಸಮಭಾವದ ಸಂಕೇತ; ಅಂಬೇಡ್ಕರ್ ಅವರ ವಿಮರ್ಶೆಯಲ್ಲಿ ಪುರಾಣದ ರಾಮನ ಆಡಳಿತದಲ್ಲಿ ಜಾತಿ ಶ್ರೇಣೀಕರಣ ಮತ್ತು ಸಾಮಾಜಿಕ ಅನ್ಯಾಯದ ಪ್ರಶ್ನೆಗಳು ಎದ್ದು ಕಾಣುತ್ತವೆ. ಇಂದು ರಾಜಕೀಯದ ಅಸ್ತ್ರವಾಗಿರುವ ಶ್ರೀರಾಮನಿಗೂ ಗಾಂಧೀಜಿ ಕನಸು ಕಂಡ ರಾಮನಿಗೂ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕಿದೆ.

ಭಾರತೀಯ ಸಮಾಜ ಮತ್ತು ರಾಜಕಾರಣದಲ್ಲಿ ರಾಮ ಎನ್ನುವ ಹೆಸರು ಕೇವಲ ಧಾರ್ಮಿಕ ನಂಬಿಕೆಗೆ ಸೀಮಿತವಾಗಿಲ್ಲ. ಅದು ಶತಮಾನಗಳಿಂದಲೂ ನೈತಿಕತೆ, ಸಂಸ್ಕೃತಿ, ಜನಪದ, ಸಾಹಿತ್ಯ ಮತ್ತು ಸಾಮಾಜಿಕ ಚಿಂತನೆಗಳ ಭಾಗವಾಗಿದೆ. ಆದರೆ, ಇತ್ತೀಚಿನ ದಶಕಗಳಲ್ಲಿ ರಾಮನ ಹೆಸರು ಧಾರ್ಮಿಕ ರಾಜಕಾರಣದ ಪ್ರಮುಖ ಸಂಕೇತವಾಗಿ ಬಳಕೆಯಾಗುತ್ತಿರುವ ಸಂದರ್ಭದಲ್ಲಿ, ಮಹಾತ್ಮ ಗಾಂಧೀಜಿ ಕಂಡ ರಾಮನಿಗೂ, ಮನುವಾದಿ ಸಿದ್ಧಾಂತಗಳು ಪ್ರತಿಪಾದಿಸುವ ರಾಮನಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಚರ್ಚಿಸುವ ಅಗತ್ಯವಿದೆ.

ಗಾಂಧೀಜಿಯವರ ಪಾಲಿಗೆ ರಾಮ ಎಂದರೆ ಅಯೋಧ್ಯೆಯ ರಾಜ ದಶರಥನ ಮಗನಾದ ರಾಮನ ವ್ಯಕ್ತಿತ್ವ ಅಥವಾ ಒಂದು ನಿರ್ದಿಷ್ಟ ಧರ್ಮದ ಆರಾಧ್ಯ ದೇವರಿಗೆ ಮಾತ್ರ ಸೀಮಿತವಾದ ಪರಿಕಲ್ಪನೆಯಾಗಿರಲಿಲ್ಲ. ಅವರ ರಾಮ ಸತ್ಯದ ಸಂಕೇತ, ನೈತಿಕತೆಯ ಪ್ರತಿರೂಪ. ರಾಮನಾಮದಲ್ಲಿ ಅವರು ಕಂಡಿದ್ದು ಮನುಷ್ಯರನ್ನು ಒಗ್ಗೂಡಿಸುವ ಶಕ್ತಿ. ಆದರೆ, ಮನುವಾದಿ ರಾಜಕೀಯದ ರಾಮನ ಪರಿಕಲ್ಪನೆಯಲ್ಲಿ ಧಾರ್ಮಿಕ ಗುರುತು, ಸಾಂಸ್ಕೃತಿಕ ಏಕಸ್ವಾಮ್ಯ ಮತ್ತು ವರ್ಣಾಶ್ರಮ ವ್ಯವಸ್ಥೆಯ ಚರ್ಚೆಗಳು ಮುನ್ನೆಲೆಗೆ ಬರುತ್ತವೆ.

ಹಾಗಾದರೆ, ಗಾಂಧೀಜಿಯವರ ರಾಮ ಯಾರು? ಅವರು ಕನಸು ಕಂಡ ರಾಮರಾಜ್ಯ ಹೇಗಿತ್ತು? ಡಾ. ಬಿ.ಆರ್. ಅಂಬೇಡ್ಕರ್ ಅವರು ರಾಮನ ಪಾತ್ರವನ್ನು ಯಾವ ದೃಷ್ಟಿಕೋನದಿಂದ ವಿಮರ್ಶಿಸಿದ್ದರು? ಇಂದಿನ ರಾಜಕೀಯದಲ್ಲಿ ರಾಮನ ಚಿತ್ರಣ ಹೇಗೆ ಬದಲಾಗಿದೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಿದಾಗ ಭಾರತೀಯ ಸಮಾಜದ ಎರಡು ವಿಭಿನ್ನ ಸೈದ್ಧಾಂತಿಕ ನೆಲೆಗಳು ನಮ್ಮ ಮುಂದೆ ತೆರೆದುಕೊಳ್ಳುತ್ತವೆ.

ಗಾಂಧೀಜಿಯವರ ರಾಮ: ಧರ್ಮದ ಗಡಿಗಳನ್ನು ಮೀರಿದ ನೈತಿಕ ಶಕ್ತಿ

ಮಹಾತ್ಮ ಗಾಂಧೀಜಿಯವರ ಜೀವನದಲ್ಲಿ ರಾಮನಾಮಕ್ಕೆ ವಿಶೇಷ ಸ್ಥಾನವಿತ್ತು. ಆದರೆ, ಅವರು ಜಪಿಸುತ್ತಿದ್ದ ರಾಮ ಯಾವುದೇ ಒಂದು ಧರ್ಮದ ಅಥವಾ ಸಮುದಾಯದ ಸ್ವತ್ತಾಗಿರಲಿಲ್ಲ. ಹಿಂದೂಗಳಿಗೆ ರಾಮ ಹೇಗೋ, ಮುಸ್ಲಿಮರಿಗೆ ರಹೀಮ್ ಹಾಗೆಯೇ ಎಂಬುದು ಅವರ ನಂಬಿಕೆಯಾಗಿತ್ತು. ರಾಮ ಮತ್ತು ರಹೀಮ್ ಬೇರೆಬೇರೆ ದೇವರುಗಳಲ್ಲ, ಮನುಷ್ಯರು ತಮ್ಮ ತಮ್ಮ ನಂಬಿಕೆಗಳ ಮೂಲಕ ಆರಾಧಿಸುವ ಪರಮಸತ್ಯದ ವಿಭಿನ್ನ ಹೆಸರುಗಳು ಎಂಬುದು ಅವರ ಧಾರ್ಮಿಕ ದೃಷ್ಟಿಕೋನ.

ಗಾಂಧೀಜಿಯವರ ಆತ್ಮಚರಿತ್ರೆ ಸತ್ಯದೊಂದಿಗೆ ನನ್ನ ಪ್ರಯೋಗಗಳು ಕೃತಿಯಲ್ಲಿ ಬಾಲ್ಯದ ಒಂದು ಮಹತ್ವದ ಘಟನೆಯನ್ನು ದಾಖಲಿಸಿದ್ದಾರೆ. ಬಾಲ್ಯದಲ್ಲಿ ಅವರನ್ನು ನೋಡಿಕೊಳ್ಳುತ್ತಿದ್ದ ರಂಭಾ ಎಂಬ ಸೇವಕಿ ಕತ್ತಲೆಯ ಭಯವನ್ನು ಹೋಗಲಾಡಿಸಲು ರಾಮನಾಮ ಜಪಿಸುವಂತೆ ಹೇಳಿಕೊಟ್ಟಿದ್ದರು. ಆ ಬಾಲ್ಯದ ಅನುಭವ ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿತು. ಮುಂದೆ ಜೀವನದಲ್ಲಿ ಸಂಕಷ್ಟಗಳು ಎದುರಾದಾಗಲೂ ರಾಮನಾಮ ಅವರಿಗೆ ಧೈರ್ಯ ಮತ್ತು ಮಾನಸಿಕ ನೆಮ್ಮದಿಯನ್ನು ನೀಡಿತು ಎಂದು ಅವರು ಸ್ಮರಿಸಿಕೊಂಡಿದ್ದಾರೆ.

ಗಾಂಧೀಜಿಯವರ ರಾಮನಾಮ ಕೇವಲ ಧಾರ್ಮಿಕ ಆಚರಣೆಯಾಗಿರಲಿಲ್ಲ. ಅದು ಸತ್ಯ, ಆತ್ಮಶುದ್ಧಿ, ಅಹಿಂಸೆ ಮತ್ತು ನೈತಿಕ ಬದುಕಿನ ಸಂಕೇತವಾಗಿತ್ತು. ಮನುಷ್ಯನ ಧಾರ್ಮಿಕ ನಂಬಿಕೆ ಆತನನ್ನು ಮತ್ತೊಬ್ಬ ಮನುಷ್ಯನಿಂದ ದೂರ ಮಾಡಬಾರದು; ಬದಲಿಗೆ ಪ್ರೀತಿ, ಸಹಬಾಳ್ವೆ ಮತ್ತು ಮಾನವೀಯತೆಯ ಕಡೆಗೆ ಕರೆದೊಯ್ಯಬೇಕು ಎಂಬುದು ಅವರ ನಿಲುವಾಗಿತ್ತು.

ಅವರ ಪಾಲಿಗೆ ದೇವರನ್ನು ಕಾಣಬೇಕಾದದ್ದು ಕೇವಲ ದೇವಸ್ಥಾನಗಳಲ್ಲಿ ಅಥವಾ ಧಾರ್ಮಿಕ ವಿಧಿವಿಧಾನಗಳಲ್ಲಿ ಅಲ್ಲ. ಬಡವರ ಸೇವೆಯಲ್ಲಿ, ಶೋಷಿತರ ಬದುಕಿನಲ್ಲಿ, ಸತ್ಯದ ಪರವಾಗಿ ನಿಲ್ಲುವುದರಲ್ಲಿ ಮತ್ತು ಅನ್ಯಾಯದ ವಿರುದ್ಧ ಹೋರಾಡುವುದರಲ್ಲಿ ದೇವರನ್ನು ಕಾಣಬಹುದೆಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು.

ರಾಮರಾಜ್ಯ ಎಂದರೆ ಹಿಂದೂ ರಾಜ್ಯವಲ್ಲ!

ಗಾಂಧೀಜಿಯವರ ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳಲ್ಲಿ ರಾಮರಾಜ್ಯ ಬಹಳ ಮಹತ್ವದ ಪರಿಕಲ್ಪನೆ. ಆದರೆ, ಈ ಪದವನ್ನು ಹಿಂದೂ ಧಾರ್ಮಿಕ ಆಡಳಿತ ಅಥವಾ ಒಂದು ನಿರ್ದಿಷ್ಟ ಧರ್ಮದ ಪ್ರಾಬಲ್ಯವಿರುವ ರಾಜ್ಯವೆಂದು ಅರ್ಥೈಸುವುದು ಅವರ ಆಶಯಕ್ಕೆ ವಿರುದ್ಧವಾದುದು. ಗಾಂಧೀಜಿಯವರು ಕನಸು ಕಂಡ ರಾಮರಾಜ್ಯ ಎಂದರೆ ರಾಜನಿಗೂ ಸಾಮಾನ್ಯ ಪ್ರಜೆಗೂ ಸಮಾನ ಹಕ್ಕುಗಳಿರಬೇಕು. ಶ್ರೀಮಂತ ಮತ್ತು ಬಡವ, ಮೇಲ್ವರ್ಗ ಮತ್ತು ಕೆಳವರ್ಗ, ಹಿಂದೂ ಮತ್ತು ಮುಸ್ಲಿಂ ಎಂಬ ಭೇದಭಾವಗಳಿಗೆ ಅವಕಾಶವಿರಬಾರದು. ಅಧಿಕಾರದಲ್ಲಿರುವವರಿಗೂ ಸಾಮಾನ್ಯ ಜನರಿಗೂ ಒಂದೇ ನ್ಯಾಯ ಅನ್ವಯವಾಗಬೇಕು.

ಅಂತಹ ಸಮಾಜದಲ್ಲಿ ಅಸ್ಪೃಶ್ಯತೆ, ಜಾತಿ ಆಧಾರಿತ ಶೋಷಣೆ, ಆರ್ಥಿಕ ಅಸಮಾನತೆ ಮತ್ತು ಧಾರ್ಮಿಕ ದ್ವೇಷಗಳಿಗೆ ಜಾಗವಿರಬಾರದು. ಪ್ರತಿಯೊಬ್ಬ ವ್ಯಕ್ತಿಗೂ ಗೌರವಯುತ ಬದುಕು ದೊರೆಯಬೇಕು. ಮಹಿಳೆಯರಿಗೆ ಸಮಾನ ಸ್ಥಾನಮಾನ ಸಿಗಬೇಕು. ದುರ್ಬಲರ ಹಕ್ಕುಗಳನ್ನು ರಕ್ಷಿಸುವುದೇ ಆಡಳಿತದ ಮೊದಲ ಕರ್ತವ್ಯವಾಗಬೇಕು. ಹೀಗಾಗಿ, ಗಾಂಧೀಜಿಯವರ ರಾಮರಾಜ್ಯವನ್ನು ಧಾರ್ಮಿಕ ರಾಜ್ಯದ ಪರಿಕಲ್ಪನೆಯಾಗಿ ನೋಡುವುದಕ್ಕಿಂತ ಸಮಾನತೆ, ನ್ಯಾಯ, ಅಹಿಂಸೆ ಮತ್ತು ಸ್ವಾವಲಂಬನೆಯ ಆಧಾರದ ಮೇಲೆ ರೂಪುಗೊಳ್ಳಬೇಕಾದ ಆದರ್ಶ ಸಮಾಜದ ಪರಿಕಲ್ಪನೆಯಾಗಿ ಅರ್ಥೈಸಬೇಕು.

ಅಂಬೇಡ್ಕರ್ ಅವರ ರಾಮನ ವಿಮರ್ಶೆ: ಶಂಬೂಕನಿಂದ ಸೀತೆಯವರೆಗೆ

ಗಾಂಧೀಜಿಯವರ ರಾಮನ ನೈತಿಕ ಮತ್ತು ಆಧ್ಯಾತ್ಮಿಕ ಪರಿಕಲ್ಪನೆಗೆ ಭಿನ್ನವಾಗಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ರಾಮಾಯಣದ ರಾಮನ ಪಾತ್ರವನ್ನು ಸಾಮಾಜಿಕ ನ್ಯಾಯ, ಜಾತಿ ವ್ಯವಸ್ಥೆ ಮತ್ತು ವ್ಯಕ್ತಿಯ ಹಕ್ಕುಗಳ ದೃಷ್ಟಿಕೋನದಿಂದ ವಿಮರ್ಶಿಸಿದ್ದಾರೆ.

ಅಂಬೇಡ್ಕರ್ ಅವರ ಕೃತಿಯಲ್ಲಿನ ವಿಮರ್ಶೆಯ ಪ್ರಮುಖ ಅಂಶ ಶಂಬೂಕನ ಪ್ರಸಂಗ. ರಾಮಾಯಣದ ಉತ್ತರಕಾಂಡದಲ್ಲಿ ಬರುವ ಈ ಕಥೆಯ ಪ್ರಕಾರ, ಶೂದ್ರನಾದ ಶಂಬೂಕ ತಪಸ್ಸು ಮಾಡುತ್ತಿದ್ದಾನೆ ಎಂಬ ಕಾರಣಕ್ಕೆ ರಾಮ ಅವನನ್ನು ಸಂಹರಿಸುತ್ತಾನೆ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಕೆಳವರ್ಗಕ್ಕೆ ನಿಗದಿಪಡಿಸಲಾದ ಸಾಮಾಜಿಕ ಮಿತಿಗಳನ್ನು ಮೀರಿದ ಕಾರಣಕ್ಕೆ ಶಂಬೂಕನಿಗೆ ಶಿಕ್ಷೆ ವಿಧಿಸಲಾಯಿತು ಎಂಬ ಕಥನವನ್ನು ಅಂಬೇಡ್ಕರ್ ಪ್ರಶ್ನಿಸುತ್ತಾರೆ.

ಜ್ಞಾನಾರ್ಜನೆ, ತಪಸ್ಸು ಮತ್ತು ಆಧ್ಯಾತ್ಮಿಕ ಸಾಧನೆಗಳು ಮನುಷ್ಯನ ಮೂಲಭೂತ ಹಕ್ಕುಗಳಾಗಿರಬೇಕು. ಆದರೆ, ಜಾತಿಯ ಆಧಾರದ ಮೇಲೆ ಯಾರಿಗೆ ಯಾವ ಜ್ಞಾನ, ಯಾವ ಸಾಧನೆ, ಯಾವ ಸ್ಥಾನಮಾನ ಎಂಬುದನ್ನು ನಿರ್ಧರಿಸುವ ವ್ಯವಸ್ಥೆ ಮಾನವ ಸಮಾನತೆಗೆ ವಿರುದ್ಧವಾಗಿದೆ. ಶಂಬೂಕನ ಪ್ರಸಂಗದಲ್ಲಿ ಅಂಬೇಡ್ಕರ್ ಕಂಡದ್ದು ಇದೇ ಸಾಮಾಜಿಕ ಅನ್ಯಾಯದ ಪ್ರತೀಕ.

ಸೀತೆಯ ವಿಚಾರದಲ್ಲಿಯೂ ಅಂಬೇಡ್ಕರ್ ತೀವ್ರವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ರಾವಣನಿಂದ ಮರಳಿ ಬಂದ ಸೀತೆಯ ಅಗ್ನಿಪರೀಕ್ಷೆಯ ನಂತರವೂ, ಒಬ್ಬ ಸಾಮಾನ್ಯ ಪ್ರಜೆಯ ಅಪವಾದಕ್ಕೆ ಹೆದರಿ ಗರ್ಭಿಣಿಯಾಗಿದ್ದ ಸೀತೆಯನ್ನು ರಾಮ ಕಾಡಿಗೆ ಕಳುಹಿಸಿದ ಪ್ರಸಂಗವನ್ನು ಅವರು ಟೀಕಿಸಿದ್ದಾರೆ.

ಒಬ್ಬ ಮಹಿಳೆಯ ಪಾವಿತ್ರ್ಯವನ್ನು ಸಾಬೀತುಪಡಿಸಲು ಅಗ್ನಿಪರೀಕ್ಷೆಗೊಳಪಡಿಸುವುದೇ ಅನ್ಯಾಯದ ಸಂಗತಿ. ಅದಾದ ನಂತರವೂ ಸಾರ್ವಜನಿಕ ಅಪವಾದದ ನೆಪದಲ್ಲಿ ಆಕೆಯನ್ನು ತ್ಯಜಿಸುವುದು ಯಾವ ರೀತಿಯ ನ್ಯಾಯ? ರಾಜನಿಗೆ ತನ್ನ ಪತ್ನಿಯ ಘನತೆ ಮತ್ತು ಹಕ್ಕುಗಳನ್ನು ರಕ್ಷಿಸುವ ಹೊಣೆಗಾರಿಕೆ ಇರಲಿಲ್ಲವೇ? ಸಮಾಜದ ಅಭಿಪ್ರಾಯದ ಎದುರು ಮಹಿಳೆಯ ಬದುಕು ಇಷ್ಟು ಅಸಹಾಯಕವಾಗಬೇಕೇ? ಎಂಬ ಪ್ರಶ್ನೆಗಳು ಅಂಬೇಡ್ಕರ್ ಅವರ ವಿಮರ್ಶೆಯ ಕೇಂದ್ರದಲ್ಲಿವೆ. ಇಲ್ಲಿ ಅಂಬೇಡ್ಕರ್ ಪ್ರಶ್ನಿಸುವುದು ಕೇವಲ ರಾಮನ ವೈಯಕ್ತಿಕ ಬದುಕನ್ನಲ್ಲ. ಮಹಿಳೆಯ ಸ್ವಾತಂತ್ರ್ಯಕ್ಕಿಂತ ಪುರುಷ ಪ್ರಧಾನ ಸಾಮಾಜಿಕ ಮರ್ಯಾದೆಗೆ ಹೆಚ್ಚಿನ ಮೌಲ್ಯ ನೀಡುವ ವ್ಯವಸ್ಥೆಯನ್ನೂ ಅವರು ಪ್ರಶ್ನಿಸುತ್ತಾರೆ.

ವಾಲಿ ವಧೆಯ ಪ್ರಸಂಗದಲ್ಲಿಯೂ ಇದೇ ರೀತಿಯ ನೈತಿಕ ಪ್ರಶ್ನೆಗಳನ್ನು ಅಂಬೇಡ್ಕರ್ ಮುಂದಿಡುತ್ತಾರೆ. ಸುಗ್ರೀವ ಮತ್ತು ವಾಲಿ ನಡುವಿನ ಸಂಘರ್ಷದಲ್ಲಿ ರಾಮ ಮಧ್ಯಪ್ರವೇಶಿಸಿ ಮರೆಯಲ್ಲಿದ್ದು ವಾಲಿಯನ್ನು ಬಾಣದಿಂದ ಸಂಹರಿಸಿದ ಕ್ರಮವನ್ನು ಅವರು ಯುದ್ಧದ ನ್ಯಾಯನೀತಿಯ ದೃಷ್ಟಿಯಿಂದ ವಿಮರ್ಶಿಸಿದ್ದಾರೆ. ಎದುರಾಳಿಗೆ ನೇರವಾಗಿ ಮುಖಾಮುಖಿಯಾಗದೆ ಮರೆಯಿಂದ ದಾಳಿ ಮಾಡುವುದು ಯಾವ ರೀತಿಯ ವೀರಧರ್ಮ? ಸೀತೆಯನ್ನು ಹುಡುಕಲು ಸುಗ್ರೀವನ ಸಹಕಾರ ಪಡೆಯುವ ಉದ್ದೇಶದಿಂದ ನಡೆದ ಈ ಕೃತ್ಯದಲ್ಲಿ ನೈತಿಕತೆಯ ಪ್ರಶ್ನೆ ಎದುರಾಗುವುದಿಲ್ಲವೇ ಎಂಬುದು ಅವರ ವಾದದ ಸಾರ.

ಈ ಪ್ರಸಂಗಗಳನ್ನು ಮುಂದಿಟ್ಟುಕೊಂಡು ಅಂಬೇಡ್ಕರ್ ರಾಮನನ್ನು ದೈವಿಕ ಮತ್ತು ಪ್ರಶ್ನಾತೀತ ವ್ಯಕ್ತಿತ್ವವಾಗಿ ನೋಡುವ ಬದಲು, ಆತನ ಕೃತ್ಯಗಳನ್ನು ತರ್ಕದ ಒರೆಗೆ ಹಚ್ಚಬೇಕು ಎಂದು ಪ್ರತಿಪಾದಿಸುತ್ತಾರೆ. ಪುರಾಣದ ಪಾತ್ರಗಳಾಗಲಿ, ಧಾರ್ಮಿಕ ನಾಯಕರುಗಳಾಗಲಿ, ಅವರ ನಡವಳಿಕೆಗಳನ್ನು ಸಾಮಾಜಿಕ ನ್ಯಾಯದ ಮಾನದಂಡದಲ್ಲಿ ಪರಿಶೀಲಿಸುವ ಹಕ್ಕು ಪ್ರತಿಯೊಬ್ಬರಿಗೂ ಇರಬೇಕು ಎಂಬುದು ಅಂಬೇಡ್ಕರ್ ಅವರ ವೈಚಾರಿಕ ನಿಲುವಿನ ಮಹತ್ವದ ಭಾಗವಾಗಿದೆ.

ಗಾಂಧಿಯ ರಾಮ ಮತ್ತು ಮನುವಾದದ ರಾಮ: ಎರಡು ವಿಭಿನ್ನ ವ್ಯಾಖ್ಯಾನಗಳು

ಗಾಂಧೀಜಿಯವರ ರಾಮನ ಪರಿಕಲ್ಪನೆ ಮತ್ತು ಮನುವಾದಿ ಚಿಂತನೆಯ ರಾಮನ ಪರಿಕಲ್ಪನೆಗಳನ್ನು ಹೋಲಿಸಿದಾಗ ಅವುಗಳ ನಡುವೆ ಸ್ಪಷ್ಟವಾದ ಸೈದ್ಧಾಂತಿಕ ವ್ಯತ್ಯಾಸ ಗೋಚರಿಸುತ್ತದೆ. ಗಾಂಧೀಜಿಯವರ ಪಾಲಿಗೆ ರಾಮ ಸತ್ಯ, ನೈತಿಕತೆ. ರಾಮರಾಜ್ಯದಲ್ಲಿ ಎಲ್ಲ ಧರ್ಮದವರಿಗೂ ಸಮಾನ ಅವಕಾಶವಿದೆ. ಬಡವ ಮತ್ತು ಶ್ರೀಮಂತ ಎಂಬ ಭೇದವಿಲ್ಲ. ಜಾತಿ ಮತ್ತು ಧರ್ಮದ ಆಧಾರದ ಮೇಲೆ ಮನುಷ್ಯರನ್ನು ವಿಭಜಿಸುವುದಕ್ಕೆ ಅವಕಾಶವಿಲ್ಲ.

ಆದರೆ, ಮನುವಾದಿ ಸಾಮಾಜಿಕ ಚಿಂತನೆಯ ಸಂದರ್ಭದಲ್ಲಿ ರಾಮನನ್ನು ವರ್ಣಾಶ್ರಮ ಧರ್ಮ, ಶಾಸ್ತ್ರಾಧಾರಿತ ಸಾಮಾಜಿಕ ಶ್ರೇಣೀಕರಣ ಮತ್ತು ಸಾಂಪ್ರದಾಯಿಕ ಅಧಿಕಾರ ವ್ಯವಸ್ಥೆಯೊಂದಿಗೆ ಜೋಡಿಸುವ ವ್ಯಾಖ್ಯಾನಗಳು ಮುನ್ನೆಲೆಗೆ ಬರುತ್ತವೆ. ಇಲ್ಲಿ ರಾಮನನ್ನು ಕೇವಲ ನೈತಿಕ ಮೌಲ್ಯದ ಸಂಕೇತವಾಗಿ ನೋಡುವುದಕ್ಕಿಂತ ಧಾರ್ಮಿಕ-ಸಾಂಸ್ಕೃತಿಕ ಗುರುತಿನ ಸಂಕೇತವಾಗಿ ಬಳಸಲಾಗುತ್ತದೆ.

ಇವೆರಡರ ನಡುವಿನ ವ್ಯತ್ಯಾಸವನ್ನು ಹೀಗೆ ಗುರುತಿಸಬಹುದು:

ರಾಮನ ಸ್ವರೂಪ: ಗಾಂಧೀಜಿಯವರ ರಾಮ ಸತ್ಯ ಮತ್ತು ನೈತಿಕತೆಯ ಸಂಕೇತ. ಮನುವಾದಿ ವ್ಯಾಖ್ಯಾನದಲ್ಲಿ ರಾಮ ಐತಿಹಾಸಿಕ ರಾಜ ಮತ್ತು ಅವತಾರ ಪುರುಷನಾಗಿ ಆರಾಧಿಸಲ್ಪಡುತ್ತಾನೆ.

ಸಾಮಾಜಿಕ ದೃಷ್ಟಿಕೋನ: ಗಾಂಧೀಜಿಯವರ ರಾಮರಾಜ್ಯ ಅಸ್ಪೃಶ್ಯತೆ ನಿವಾರಣೆ, ಸಮಾನತೆ ಮತ್ತು ಸರ್ವಧರ್ಮ ಸಹಬಾಳ್ವೆಯನ್ನು ಪ್ರತಿಪಾದಿಸುತ್ತದೆ. ಮನುವಾದಿ ಸಾಮಾಜಿಕ ವ್ಯವಸ್ಥೆಯೊಂದಿಗೆ ಜೋಡಿಸಲ್ಪಡುವ ರಾಮನ ವ್ಯಾಖ್ಯಾನವು ವರ್ಣಾಶ್ರಮದ ಶ್ರೇಣೀಕರಣದ ಪ್ರಶ್ನೆಗಳಿಗೆ ಒಳಗಾಗುತ್ತದೆ.

ರಾಜ್ಯದ ಪರಿಕಲ್ಪನೆ: ಗಾಂಧೀಜಿಯವರ ರಾಮರಾಜ್ಯ ಬಡವ-ಬಲ್ಲಿದರ ನಡುವೆ ಸಮಾನತೆ, ನ್ಯಾಯ ಮತ್ತು ಅಹಿಂಸೆಯನ್ನು ಆಧರಿಸಿದೆ. ಮನುವಾದಿ ವ್ಯಾಖ್ಯಾನದಲ್ಲಿ ಶಾಸ್ತ್ರಾಧಾರಿತ ಸಾಮಾಜಿಕ ನಿಯಮಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ.

ಮನುಷ್ಯನ ಸ್ಥಾನಮಾನ: ಗಾಂಧೀಜಿಯವರಿಗೆ ಪ್ರತಿಯೊಬ್ಬ ಮನುಷ್ಯನೂ ಸಮಾನ ಗೌರವಕ್ಕೆ ಅರ್ಹ. ಮನುವಾದಿ ಜಾತಿ, ಧರ್ಮ ಮತ್ತು ಆರ್ಥಿಕ ಸ್ಥಿತಿಯ ಆಧಾರದ ಮೇಲೆ ವ್ಯಕ್ತಿಯ ಮೌಲ್ಯ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ರಾಮನನ್ನು ನಂಬುವ ಪ್ರತಿಯೊಬ್ಬರೂ ಮನುವಾದಿಗಳಲ್ಲ. ಹಿಂದೂ ಧರ್ಮದೊಳಗೆ ಅನೇಕ ಬಗೆಯ ರಾಮಾಯಣಗಳು, ರಾಮನ ಕುರಿತ ವಿಭಿನ್ನ ವ್ಯಾಖ್ಯಾನಗಳು ಮತ್ತು ಸಾಮಾಜಿಕ ಚಿಂತನೆಗಳಿವೆ.

ಆದರೆ, ರಾಮನ ಹೆಸರಿನಲ್ಲಿ ಜಾತಿ ಶ್ರೇಣೀಕರಣ ಅಥವಾ ಧಾರ್ಮಿಕ ಬಹಿಷ್ಕಾರವನ್ನು ಸಮರ್ಥಿಸುವ ರಾಜಕೀಯ ನಿಲುವುಗಳನ್ನು ಗಾಂಧೀಜಿಯವರ ಸಮಾನತೆಯ ರಾಮರಾಜ್ಯದೊಂದಿಗೆ ಸಮೀಕರಿಸಲು ಸಾಧ್ಯವಿಲ್ಲ.

ರಾಜಕೀಯ ಶ್ರೀರಾಮನಾಗಿ ಬದಲಾದ ರಾಮ: ಚಂದ್ರೇಗೌಡರ ಕಳವಳ

ಇಂದಿನ ರಾಜಕೀಯ ಸಂದರ್ಭದಲ್ಲಿ ರಾಮನ ಚಿತ್ರಣ ಹೇಗೆ ಬದಲಾಗಿದೆ ಎಂಬುದನ್ನು ಹಿರಿಯ ಪತ್ರಕರ್ತ ಬಿ. ಚಂದ್ರೇಗೌಡ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಮತ್ತೊಂದು ಆಯಾಮದಲ್ಲಿ ತೆರೆದಿಡುತ್ತವೆ.

ಅವರು, ಅನಾದಿ ಕಾಲದಿಂದಲೂ ಜನರು ರಾಮ, ಸೀತೆ ಮತ್ತು ಆಂಜನೇಯರನ್ನು ತಮ್ಮ ಮನೆಗಳಲ್ಲಿನ ದೇವರ ಚಿತ್ರಗಳ ಮೂಲಕ ಶಾಂತ ಮತ್ತು ಸೌಮ್ಯ ಸ್ವರೂಪದಲ್ಲಿ ಕಂಡುಕೊಂಡಿದ್ದರು ಎಂದು ಸ್ಮರಿಸುತ್ತಾರೆ.

ಆದರೆ, ಕಾಲಕ್ರಮೇಣ ಈ ಚಿತ್ರಣ ರಾಜಕೀಯ ಸಂಕೇತವಾಗಿ ಬದಲಾಗಿರುವುದನ್ನು ಅವರು ಗಮನಿಸಿದ್ದಾರೆ. ಅವರ ಮಾತಿನಲ್ಲಿ ಹೇಳುವುದಾದರೆ, ಶಾಂತ ಸ್ವರೂಪದಲ್ಲಿದ್ದ ರಾಮ ಬಿಜೆಪಿಯ ರಾಜಕೀಯ ಶ್ರೀರಾಮನಾದಾಗ ಕೈಗೆ ಬಿಲ್ಲು ಬಂತು; ಆತ ಒಂಟಿಯಾದ. ಸೌಮ್ಯ ಸ್ವರೂಪದ ಹನುಮ ಉಗ್ರರೂಪಿಯಾದ, ಏಕಾಂಗಿಯಾದ. ಇದು ಇಂದಿನ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಯ ಪ್ರತಿಬಿಂಬ ಎಂದು ಅವರು ವಿಶ್ಲೇಷಿಸುತ್ತಾರೆ.

ಅಯೋಧ್ಯೆಗೆ ತಾವು ಭೇಟಿ ನೀಡಿದ ಸಂದರ್ಭದಲ್ಲಿ ಎದುರಾದ ಭದ್ರತಾ ತಪಾಸಣೆಯ ಅನುಭವವನ್ನೂ ಚಂದ್ರೇಗೌಡ ಹಂಚಿಕೊಂಡಿದ್ದಾರೆ. ವಿಮಾನ ನಿಲ್ದಾಣದಲ್ಲಿ ನಡೆಯುವ ಭದ್ರತಾ ತಪಾಸಣೆಯಂತೆಯೇ ದೇವಸ್ಥಾನದ ಸುತ್ತಮುತ್ತಲಿನ ತಪಾಸಣೆಗಳು ಕಂಡವು. ದೇವಸ್ಥಾನದಲ್ಲಿ ಇಷ್ಟೊಂದು ಕಾವಲು ಏಕೆ ಎಂಬ ಪ್ರಶ್ನೆ ತಮ್ಮಲ್ಲಿ ಮೂಡಿತು. ಒಂದು ನಿರ್ದಿಷ್ಟ ಸಮುದಾಯದಿಂದ ಶ್ರೀರಾಮನಿಗೆ ಅಪಾಯವಿದೆ ಎಂಬ ಭಾವನೆ ಮೂಡಿಸುವ ರೀತಿಯಲ್ಲಿ ಆ ವ್ಯವಸ್ಥೆ ಕಂಡಿತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ದೇವಸ್ಥಾನವೆಂದರೆ ಸಾಮಾನ್ಯವಾಗಿ ಪ್ರಶಾಂತತೆ, ಭಕ್ತಿ ಮತ್ತು ಆಧ್ಯಾತ್ಮಿಕ ನೆಮ್ಮದಿಯ ಅನುಭವವಾಗಬೇಕು. ಆದರೆ, ಅಲ್ಲಿ ಚೀತ್ಕಾರ, ಧಾರ್ಮಿಕ ಉನ್ಮಾದ ಮತ್ತು ಮತೀಯವಾದದ ವಿಕಾರತೆಗಳು ಕಾಣಿಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂಬುದು ಅವರ ಅಭಿಪ್ರಾಯ.

ಗಾಂಧೀಜಿಯವರ ಉಡುಪಿ ಭೇಟಿಯ ಸಂದರ್ಭದಲ್ಲಿ ನಡೆದ ಘಟನೆಯನ್ನೂ ಚಂದ್ರೇಗೌಡ ನೆನಪಿಸಿಕೊಳ್ಳುತ್ತಾರೆ. ದೇವಸ್ಥಾನಕ್ಕೆ ಭೇಟಿ ನೀಡುವುದಕ್ಕಿಂತ ದೇವಸ್ಥಾನದ ಹಿಂಭಾಗದಲ್ಲಿದ್ದ ಕನಕನ ಕಿಂಡಿಯನ್ನು ವೀಕ್ಷಿಸಲು ಗಾಂಧೀಜಿ ಆದ್ಯತೆ ನೀಡಿದ್ದರು ಎಂಬ ಪ್ರಸಂಗವನ್ನು ಅವರು ಉಲ್ಲೇಖಿಸುತ್ತಾರೆ. ದೇವಸ್ಥಾನದ ಆವರಣಗಳಲ್ಲಿ ಸಭೆ, ಸಮಾರಂಭಗಳನ್ನು ನಡೆಸದಿರುವುದು ಸೇರಿದಂತೆ ಗಾಂಧೀಜಿಯವರ ಧಾರ್ಮಿಕ ಬದುಕಿನಲ್ಲಿದ್ದ ಬದ್ಧತೆಯನ್ನು ಅವರು ನೆನಪಿಸುತ್ತಾರೆ.

ಚಂದ್ರೇಗೌಡರ ಮಾತಿನ ಸಾರ ಸ್ಪಷ್ಟವಾಗಿದೆ: ಗಾಂಧೀಜಿಯವರ ರಾಮ ಎಂದರೆ ಆದರ್ಶ ಸಮಾಜ, ಭಯಮುಕ್ತ ಸಮಾಜ ಮತ್ತು ಸಮಾನತೆಯ ಸಮಾಜ. ಅದು ಆರ್‌ಎಸ್‌ಎಸ್ ಮತ್ತು ಬಿಜೆಪಿಯ ರಾಜಕೀಯ ರಾಮನ ಪರಿಕಲ್ಪನೆಯಾಗಿರಲಿಲ್ಲ.

ರಾಮ ಯಾರಿಗೆ ಸೇರಬೇಕು?

ಭಾರತದ ಬಹುತ್ವದ ಪರಂಪರೆಯಲ್ಲಿ ರಾಮನಿಗೆ ಅನೇಕ ರೂಪಗಳಿವೆ. ವಾಲ್ಮೀಕಿ ರಾಮಾಯಣದ ರಾಮ, ತುಳಸೀದಾಸರ ರಾಮ, ಕಂಬ ರಾಮಾಯಣದ ರಾಮ, ಜನಪದ ರಾಮ ಮತ್ತು ಗಾಂಧೀಜಿಯವರ ರಾಮ ಇವೆಲ್ಲವೂ ಒಂದೇ ರೀತಿಯ ವ್ಯಾಖ್ಯಾನಗಳಲ್ಲ. ಪ್ರತಿಯೊಂದು ಕಾಲಘಟ್ಟವೂ ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನುಭವಗಳ ಮೂಲಕ ರಾಮನನ್ನು ಅರ್ಥೈಸಿಕೊಂಡಿದೆ.

ಆದರೆ, ಒಂದು ಧಾರ್ಮಿಕ ಸಂಕೇತವನ್ನು ರಾಜಕೀಯ ಅಧಿಕಾರದ ಸಾಧನವನ್ನಾಗಿ ಪರಿವರ್ತಿಸುವಾಗ ಅದರ ಮೂಲ ನೈತಿಕ ಆಶಯಗಳು ಮರೆಯಾಗುವ ಅಪಾಯವಿದೆ. ರಾಮನ ಹೆಸರಿನಲ್ಲಿ ಸಮಾಜದಲ್ಲಿ ಭಯ, ದ್ವೇಷ ಮತ್ತು ಧಾರ್ಮಿಕ ವಿಭಜನೆ ಹೆಚ್ಚಾದರೆ, ಅದು ಗಾಂಧೀಜಿಯವರು ಪ್ರತಿಪಾದಿಸಿದ ರಾಮನಾಮದ ಆಶಯಕ್ಕೆ ವಿರುದ್ಧವಾಗುತ್ತದೆ.

ಅದೇ ರೀತಿ, ಅಂಬೇಡ್ಕರ್ ಎತ್ತಿದ ಪ್ರಶ್ನೆಗಳನ್ನು ಕಡೆಗಣಿಸಿ ಪುರಾಣದ ಪಾತ್ರಗಳನ್ನು ಪ್ರಶ್ನಾತೀತರನ್ನಾಗಿ ಮಾಡುವುದರಿಂದ ಸಾಮಾಜಿಕ ನ್ಯಾಯದ ಚರ್ಚೆಗೆ ಅವಕಾಶವಿರುವುದಿಲ್ಲ. ಶಂಬೂಕನಿಗೆ ಜ್ಞಾನಾರ್ಜನೆಯ ಹಕ್ಕು ಇರಬೇಕೇ? ಸೀತೆಗೆ ಸ್ವತಂತ್ರ ವ್ಯಕ್ತಿತ್ವ ಮತ್ತು ಗೌರವಯುತ ಬದುಕಿನ ಹಕ್ಕು ಇರಬೇಕೇ? ವಾಲಿಯ ವಧೆಯಲ್ಲಿ ನ್ಯಾಯನೀತಿ ಪಾಲನೆಯಾಗಿದೆಯೇ? ಇಂತಹ ಪ್ರಶ್ನೆಗಳನ್ನು ಕೇಳುವುದು ಧರ್ಮದ ವಿರುದ್ಧದ ಕ್ರಮವಲ್ಲ; ಅದು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸುವ ವೈಚಾರಿಕ ಪ್ರಯತ್ನ.

ಇಂದು ದೇಶಕ್ಕೆ ಬೇಕಾಗಿರುವುದು ಧಾರ್ಮಿಕ ಗುರುತಿನ ಆಧಾರದ ಮೇಲೆ ಮನುಷ್ಯರನ್ನು ವಿಭಜಿಸುವ ರಾಮರಾಜ್ಯವಲ್ಲ. ಜಾತಿ, ಧರ್ಮ, ಭಾಷೆ ಮತ್ತು ಆರ್ಥಿಕ ಸ್ಥಿತಿಯ ಭೇದವಿಲ್ಲದೆ ಪ್ರತಿಯೊಬ್ಬರಿಗೂ ಸಮಾನ ಹಕ್ಕು, ಗೌರವ ಮತ್ತು ನ್ಯಾಯ ದೊರೆಯುವ ಸಮಾಜ. ಹಸಿದವನಿಗೆ ಅನ್ನ, ಶೋಷಿತನಿಗೆ ನ್ಯಾಯ, ಮಹಿಳೆಗೆ ಸಮಾನತೆ, ದುರ್ಬಲರಿಗೆ ರಕ್ಷಣೆ ಮತ್ತು ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ದೊರೆಯುವ ವ್ಯವಸ್ಥೆ.

ರಾಮನ ಹೆಸರಿನಲ್ಲಿ ರಾಜಕೀಯ ಮಾಡುವವರು ಗಾಂಧೀಜಿಯವರ ರಾಮರಾಜ್ಯದ ಆಶಯಗಳನ್ನು ಒಮ್ಮೆ ನೆನಪಿಸಿಕೊಳ್ಳಬೇಕು. ಅದೇ ರೀತಿ, ಅಂಬೇಡ್ಕರ್ ಅವರ ವಿಮರ್ಶಾತ್ಮಕ ಚಿಂತನೆಯನ್ನೂ ಅರ್ಥಮಾಡಿಕೊಳ್ಳಬೇಕು. ಧಾರ್ಮಿಕ ನಂಬಿಕೆ ವೈಯಕ್ತಿಕ ಸ್ವಾತಂತ್ರ್ಯ. ಆದರೆ, ಆ ನಂಬಿಕೆಯ ಹೆಸರಿನಲ್ಲಿ ಮತ್ತೊಬ್ಬರ ಹಕ್ಕುಗಳನ್ನು ನಿರಾಕರಿಸುವ ಅಧಿಕಾರ ಯಾರಿಗೂ ಇಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR